# Loan Agreement

This Loan Agreement **("Agreement")** is executed between Fincfriends Private Limited, a Company incorporated under the provisions of Companies Act 2013 having its registered office at BHIVE Workspace, No.467/468, Shri Krishna Temple Road, Indiranagar 1st Stage, Bengaluru, Karnataka – 560038 and corporate office at 7th Floor, Vatika Triangle, Mehrauli Gurgaon Road, B Block, Sushant Lok Phase I, Gurgaon, Haryana-122002 (hereinafter referred to as **"Lender"** which expression shall, unless repugnant to the context, include its successors and assigns) and **Borrower**, the particulars whereof are described and set out in **Schedule I**.

The Borrower has applied for a Loan facility and the Lender has sanctioned the same in the form of Revolving Credit Line which will be governed by under given terms and conditions read together with the Sanction Letter. Borrower agrees and undertakes that each Loan taken by the Borrower within such approved credit line will be subject to the clauses of the Agreement, as amended from time to time, and the grant of each Loan within the limits of the credit line will be subject to the Borrower's fulfilment of the Lender's then subsisting credit policy.

The Lender and Borrower are hereinafter collectively referred to as "**Parties**" and individually as "**Party**".

**WHEREAS:**

A. The Lender is a non-banking financial company, inter alia, engaged in the business of

# ಸಾಲ ಒಪ್ಪಂದ

ಈ ಸಾಲ ಒಪ್ಪಂದವನ್ನು **("ಒಪ್ಪಂದ")** ಬಿಹೈವ್ ವರ್ಕ್‌ಸ್ಪೇಸ್, ನಂ.467/468, ಶ್ರೀ ಕೃಷ್ಣ ದೇವಸ್ಥಾನ ರಸ್ತೆ, ಇಂದಿರಾನಗರ 1 ನೇ ಹಂತ, ಬೆಂಗಳೂರು, ಕರ್ನಾಟಕ - 560038 ನಲ್ಲಿ ನೋಂದಾಯಿತ ಕಚೇರಿಯನ್ನು ಹೊಂದಿರುವ ಹಾಗೂ 7 ನೇ ಮಹಡಿ, ವಾಟಿಕಾ ಟ್ರಯಾಂಗಲ್, ಮೆಹ್ರೌಲಿ ಗುರ್‌ಗಾಂವ್ ರೋಡ್, ಬಿ ಬ್ಲಾಕ್, ಸುಶಾಂತ್ ಲೋಕ್ ಫೇಸ್ I, ಗುರ್‌ಗಾಂವ್, ಹರಿಯಾಣ- 122002 ನಲ್ಲಿರುವ ಕಾರ್ಪೊರೇಟ್ ಕಚೇರಿ ಹೊಂದಿರುವ ಕಂಪನಿಗಳ ಕಾಯ್ದೆ 2013 ರ ನಿಬಂಧನೆಗಳ ಅಡಿಯಲ್ಲಿ ಸಂಯೋಜಿಸಲ್ಪಟ್ಟ ಕಂಪನಿ, ಫಿಂಕ್‌ಫ್ರೆಂಡ್ಸ್ ಪ್ರೈವೇಟ್ ಲಿಮಿಟೆಡ್ (ಇನ್ನು ಮುಂದೆ **"ಸಾಲದಾತ"** ಎಂದು ಉಲ್ಲೇಖಿಸಲಾಗುತ್ತದೆ, ಈ ಅಭಿವ್ಯಕ್ತಿಯು ಉತ್ತರಾಧಿಕಾರಿಗಳು ಮತ್ತು ನಿಯೋಜಿತರನ್ನು ಒಳಗೊಂಡಂತೆ ಸಂದರ್ಭಕ್ಕೆ ವಿರುದ್ಧವಾಗಿರದ ಹೊರತು) ಮತ್ತು **ಸಾಲಗಾರ**ರ ನಡುವೆ ಕಾರ್ಯಗತಗೊಳಿಸಲಾಗುತ್ತಿದ್ದು, ಅದರ ವಿವರಗಳನ್ನು **ಶೆಡ್ಯೂಲ್ I** ರಲ್ಲಿ ವಿವರಿಸಲಾಗಿದೆ ಮತ್ತು ನಿಗದಿಪಡಿಸಲಾಗಿದೆ.

ಸಾಲ ಸೌಲಭ್ಯಕ್ಕಾಗಿ ಸಾಲಗಾರರು ಅರ್ಜಿ ಸಲ್ಲಿಸಿದ್ದಾರೆ ಮತ್ತು ಮಂಜೂರಾತಿ ಪತ್ರದೊಂದಿಗೆ ನೀಡಲಾದ ನಿರ್ದಿಷ್ಟ ಕರಾರುಗಳು ಮತ್ತು ಷರತ್ತುಗಳ ಅಡಿಯಲ್ಲಿ, ರಿವಾಲ್ವಿಂಗ್ ಕ್ರೆಡಿಟ್ ಲೈನ್ ರೂಪದಲ್ಲಿ ಸಾಲದಾತರು ಅದನ್ನು ಮಂಜೂರು ಮಾಡಿದ್ದಾರೆ. ಅನುಮೋದಿತ ಕ್ರೆಡಿಟ್ ಲೈನ್‌ನೊಳಗೆ ಸಾಲಗಾರರು ತೆಗೆದುಕೊಳ್ಳುವ ಪ್ರತಿ ಸಾಲವು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗುವ ಒಪ್ಪಂದದ ಷರತ್ತುಗಳಿಗೆ ಒಳಪಟ್ಟಿರುತ್ತದೆ ಎಂದು ಸಾಲಗಾರರು ಒಪ್ಪುತ್ತಾರೆ ಮತ್ತು ಅಂಗೀಕರಿಸುತ್ತಾರೆ ಮತ್ತು ಕ್ರೆಡಿಟ್ ಲೈನ್ ಮಿತಿಯೊಳಗೆ ಪ್ರತಿ ಸಾಲದ ಮಂಜೂರಾತಿಯು ಸಾಲದಾತರ ಆ ಸಮಯದಲ್ಲಿ ಅಸ್ತಿತ್ವದಲ್ಲಿರುವ ಸಾಲದ ನೀತಿಯನ್ನು ಸಾಲಗಾರರು ಪೂರೈಸುವಿಕೆಗೆ ಒಳಪಟ್ಟಿರುತ್ತದೆ.

ಸಾಲದಾತರು ಮತ್ತು ಸಾಲಗಾರರನ್ನು ಇನ್ನು ಮುಂದೆ ಒಟ್ಟಾಗಿ **"ಕಕ್ಷಿಗಳು"** ಎಂದು ಮತ್ತು ಪ್ರತ್ಯೇಕವಾಗಿ **"ಕಕ್ಷಿ"** ಎಂದು ಸಂಭೋದಿಸಲಾಗುತ್ತದೆ.

**ಆದರೆ:**

A. ಈ ಸಾಲದಾತರು ಬ್ಯಾಂಕೇತರ ಆರ್ಥಿಕ ಕಂಪನಿಯಾಗಿದ್ದು, ಇತರ ಸಾಲಗಳ

providing personal loans/ credit facilities to various customers.

B. The Borrower has requested the Lender to grant the Loan to the Borrower and the Lender, relying upon the representations made and information provided by the Borrower, has agreed to grant the Loan to the Borrower, on the terms and conditions contained in this Agreement and in other Loan Documents, up to the maximum principal amount and maximum tenor as mentioned in Schedule I, and for the purpose as mentioned in the Loan Application, in its sole and absolute discretion.

**NOW, THEREFORE**, in consideration of the foregoing and other good and valid consideration, the receipt and adequacy of which is expressly acknowledged, the Parties hereby agree as follows:

## 1. DEFINITIONS AND INTERPRETATION

### 1.1 Definitions

For the purposes of this Agreement, in addition to the terms defined in the description of the Parties: (a) all capitalized words and expressions defined by inclusion in quotation and/or parenthesis anywhere in this Agreement, have the same meanings as ascribed to such words and expressions;

ಜೊತೆಗೆ ವಿವಿಧ ಗ್ರಾಹಕರಿಗೆ ವೈಯಕ್ತಿಕ ಸಾಲಗಳು/ಸಾಲ ಸೌಲಭ್ಯಗಳನ್ನು ಒದಗಿಸುವ ವ್ಯವಹಾರದಲ್ಲಿ ತೊಡಗಿಸಿಕೊಂಡಿದೆ.

B. ಸಾಲಗಾರರು ಸಾಲವನ್ನು ಮಂಜೂರು ಮಾಡುವಂತೆ ಸಾಲದಾತರನ್ನು ವಿನಂತಿಸಿಕೊಂಡಿದ್ದಾರೆ ಮತ್ತು ಸಾಲಗಾರರು ನೀಡಿದ ಪ್ರಾತಿನಿಧ್ಯ, ಮಾಹಿತಿಯನ್ನು ಅವಲಂಬಿಸಿ ಈ ಒಪ್ಪಂದ ಮತ್ತು ಸಾಲ ಸಂಬಂಧಿತ ಇತರ ದಾಖಲೆಗಳಲ್ಲಿರುವ ಕರಾರುಗಳು ಮತ್ತು ಷರತ್ತುಗಳ ಮೇಲೆ, ಶೆಡ್ಯೂಲ್ I ರಲ್ಲಿ ಉಲ್ಲೇಖಿಸಿರುವಂತೆ ಗರಿಷ್ಠ ಮೂಲ ಮೊತ್ತ ಮತ್ತು ಗರಿಷ್ಠ ಅವಧಿಯವರೆಗೆ ಹಾಗೂ ಸಾಲದ ಅರ್ಜಿಯಲ್ಲಿ ಉಲ್ಲೇಖಿಸಿರುವ ಉದ್ದೇಶಕ್ಕಾಗಿ, ತನ್ನ ಸ್ವಂತ ಮತ್ತು ಸಂಪೂರ್ಣ ವಿವೇಚನೆಯಿಂದ ಸಾಲವನ್ನು ನೀಡಲು ಸಾಲದಾತರು ಒಪ್ಪಿಕೊಂಡಿರುತ್ತಾರೆ.

ಆದ್ದರಿಂದ, ಈಗ, ಮೇಲೆ ತಿಳಿಸಲಾಗಿರುವ ಹಾಗೂ ಇತರ ಸರಿಯಾದ ಮತ್ತು ಮಾನ್ಯ ಅಂಶಗಳನ್ನು ಪರಿಗಣಿಸಿ, ಅವುಗಳ ಸ್ವೀಕೃತಿ ಮತ್ತು ಸಮರ್ಪಕತೆಯನ್ನು ಸ್ಪಷ್ಟವಾಗಿ ಅಂಗೀಕರಿಸಲಾಗಿದೆ, ಕಕ್ಷಿಗಳು ಈ ಕೆಳಗೆ ನೀಡಲಾದ ವಿಷಯಗಳಿಗೆ ಸಮ್ಮತಿಸುತ್ತಾರೆ:

## 1. ಅರ್ಥನಿರೂಪಣೆ ಮತ್ತು ವ್ಯಾಖ್ಯಾನಗಳು

### 1.1 ವ್ಯಾಖ್ಯಾನಗಳು

ಈ ಒಪ್ಪಂದದ ಉದ್ದೇಶಗಳಿಗಾಗಿ, ಪಕ್ಷಗಳ ವಿವರಣೆಯಲ್ಲಿ ವ್ಯಾಖ್ಯಾನಿಸಲಾದ ನಿಯಮಗಳಿಗೆ ಹೆಚ್ಚುವರಿಯಾಗಿ: (a) ಈ ಒಪ್ಪಂದದಲ್ಲಿ ಯಾವುದೇ ಸ್ಥಳದಲ್ಲಿ ಉಲ್ಲೇಖಿಸಿರುವ ಮತ್ತು/ಅಥವಾ ಕೊಟೇಷನ್‌ನಲ್ಲಿ ಸೇರಿಸುವ ಮೂಲಕ ವ್ಯಾಖ್ಯಾನಿಸಲಾದ ಎಲ್ಲಾ ದೊಡ್ಡಕ್ಷರದ ಪದಗಳು ಮತ್ತು ಪದವಿನ್ಯಾಸಗಳು, ಆ ರೀತಿಯ ಪದಗಳು ಮತ್ತು ಪದವಿನ್ಯಾಸಗಳಿಗೆ ನೀಡಲಾದ ಅದೇ ಅರ್ಥಗಳನ್ನು

| | |
|---|---|
| (b) words and expressions used herein but not defined shall have the same meaning as assigned to them in General Clauses Act, 1897; and (c) following words and expressions shall have the meaning as set-out in this Clause 1: | ಹೊಂದಿರುತ್ತವೆ; (b) ಇಲ್ಲಿ ಬಳಸಲಾದ ಆದರೆ ವ್ಯಾಖ್ಯಾನಿಸದ ಪದಗಳು ಮತ್ತು ಪದವಿನ್ಯಾಸಗಳು 1897 ರ ಸಾಮಾನ್ಯ ಷರತ್ತುಗಳ ಕಾಯ್ದೆಯಲ್ಲಿ ಅವುಗಳಿಗೆಂದೆ ನಿಗದಿಪಡಿಸಲಾದ ಅರ್ಥವನ್ನು ಹೊಂದಿರುತ್ತವೆ; ಮತ್ತು (c) ಈ ಕೆಳಗಿನ ಪದಗಳು ಮತ್ತು ಪದವಿನ್ಯಾಸಗಳು ಈ ಷರತ್ತು 1 ರಲ್ಲಿ ನಿರ್ದಿಷ್ಟಪಡಿಸಿದ ಅರ್ಥವನ್ನು ಹೊಂದಿರುತ್ತವೆ: |
| "**Advance EMI**" means the payment of EMIs made to the Lender prior to the respective Due Date in respect of their loan amount. | **"ಮುಂಗಡ EMI"** ಎಂದರೆ ಸಾಲಗಾರರು ಪಡೆದ ಸಾಲದ ಮೊತ್ತಕ್ಕೆ ಸಂಬಂಧಿಸಿದಂತೆ ಆಯಾ ಗಡುವು ದಿನಾಂಕದ ಮೊದಲೇ ಸಾಲದಾತರಿಗೆ ಮಾಡಲಾದ EMI ಗಳ ಪಾವತಿ. |
| **"Agreement"** means and includes this Agreement, together with all the schedules, exhibits, addendums, attachments and appendices annexed hereto and all amendments/supplements hereto and restatements hereto; | **"ಒಪ್ಪಂದ"** ಎಂದರೆ ಈ ಒಪ್ಪಂದವನ್ನು ಒಳಗೊಂಡಂತೆ, ಇಲ್ಲಿ ಲಗತ್ತಿಸಲಾದ ಎಲ್ಲಾ ಶೆಡ್ಯೂಲ್‌ಗಳು, ಪ್ರದರ್ಶಿಸಲಾದ ಅಂಶಗಳು, ಅನುಬಂಧಗಳು, ಲಗತ್ತಿಸಲಾದ ದಾಖಲೆಗಳು ಮತ್ತು ಇಲ್ಲಿ ಸೇರಿಸಲಾದ ಎಲ್ಲಾ ತಿದ್ದುಪಡಿಗಳು/ಪೂರಕ ಮಾಹಿತಿಗಳು ಮತ್ತು ಪುನರಾವರ್ತಿತ ಹೇಳಿಕೆಗಳನ್ನು ಇದು ಒಳಗೊಂಡಿರುತ್ತದೆ; |
| **"Applicable Law"** means the 'Indian Law' as per the General Clauses Act, 1897; | "**ಅನ್ವಯವಾಗುವ ಕಾನೂನು**" ಎಂದರೆ 1897 ರ ಸಾಮಾನ್ಯ ಷರತ್ತುಗಳ ಕಾಯ್ದೆಯ ಪ್ರಕಾರ 'ಭಾರತೀಯ ಕಾನೂನು'; |
| **"APR"** means the Annual Percentage Rate which is an annualized rate charged by the Lender from the Borrower and based on all-inclusive cost of funds, processing fee, optional term fee, SMS alert collection charges, insurance charges, Interest Rate etc. and the margin of the Lender and exclude contingent charges like Penal Charges etc; | **"APR"** ಎಂದರೆ (ಆ್ಯನ್ಯುವಲ್ಪೈಸ್ಡ್ ಪರ್ಸಟೆಂಜ್ ರೇಟ್) ವಾರ್ಷಿಕ ಶೇಕಡಾವಾರು ದರ, ಇದು ಸಾಲದಾತರು ಸಾಲಗಾರರಿಗೆ ವಿಧಿಸುವ ವಾರ್ಷಿಕ ದರವಾಗಿದ್ದು, ಸಾಲ ಮೊತ್ತದ ಎಲ್ಲವನ್ನೂ ಒಳಗೊಂಡ ವೆಚ್ಚ, ಪ್ರಕ್ರಿಯಾ ಶುಲ್ಕ, ಐಚ್ಛಿಕ ಅವಧಿ ಶುಲ್ಕ, SMS ಅಲರ್ಟ್ ಸಂಗ್ರಹ ಶುಲ್ಕಗಳು, ವಿಮಾ ಶುಲ್ಕಗಳು, ಬಡ್ಡಿ ದರ ಇತ್ಯಾದಿಗಳನ್ನು ಒಳಗೊಂಡಿರುತ್ತದೆ ಹಾಗೂ ಸಾಲದಾತರ ಮಾರ್ಜಿನ್ ಮತ್ತು ದಂಡದ ಶುಲ್ಕಗಳು ಮುಂತಾದ ಅನಿಶ್ಚಿತ ಶುಲ್ಕಗಳನ್ನು ಇದರಿಂದ ಹೊರತುಪಡಿಸಲಾಗುತ್ತದೆ; |

| | |
|---|---|
| **“Available Loan Limit”** means amount of Loan available for draw down by the Borrower out of the Sanctioned Loan Limit. | **"ಲಭ್ಯವಿರುವ ಸಾಲ ಮಿತಿ"** ಎಂದರೆ ಸಾಲಗಾರರು ಮಂಜೂರು ಮಾಡಿದ ಸಾಲ ಮಿತಿಯಿಂದ ಸಾಲಗಾರರು ಪಡೆಯಲು ಸಾಧ್ಯವಾಗುವ ಸಾಲದ ಮೊತ್ತ. |
| **“Bank Account”** means the bank account where the Loan disbursement is requested by the Borrower; | **"ಬ್ಯಾಂಕ್ ಖಾತೆ"** ಎಂದರೆ ಸಾಲಗಾರರು ಸಾಲ ವಿತರಣೆಯನ್ನು ವಿನಂತಿಸಿದ ತಮ್ಮ ಬ್ಯಾಂಕ್ ಖಾತೆ; |
| **“Cooling off/ look-up period”** is the time window equal to the 1st (first) grace period as determined by the Board of the Lender which shall be given to Borrower for exiting Loan, in case Borrower decides not to continue with the Loan | **"ಕೂಲಿಂಗ್ ಆಫ್/ಲುಕ್-ಅಪ್ ಅವಧಿ"** ಎನ್ನುವುದು ಸಾಲದಾತರ ಮಂಡಳಿಯು ನಿರ್ಧರಿಸುವ ವಿಷಯವಾಗಿದ್ದು 1 1 (ಮೊದಲ) ರಿಯಾಯಿತ ಅವಧಿಗೆ ಇದು ಸಮನಾಗಿರುತ್ತದೆ, ಸಾಲಗಾರರು ಸಾಲವನ್ನು ಮುಂದುವರಿಸದೇ ಇರಲು ತೀರ್ಮಾನಿಸಿದರೆ ಸಾಲದಿಂದ ಹೊರನಡೆಯಲು ಸಾಲಗಾರರಿಗೆ ಈ ಆಯ್ಕೆಯನ್ನು ನೀಡಲಾಗುತ್ತದೆ. |
| **“Digital Lending Application/DLA”** means the digital application belonging to technical services provider ‘Vivamoney Solutions Private Limited’ that allows the Borrower to make withdrawals, make repayments, change payment dates and provides full access to the Loan management. | **"ಡಿಜಿಟಲ್ ಲೆಂಡಿಂಗ್ ಅಪ್ಲಿಕೇಶನ್/DLA"** ಎಂದರೆ ತಾಂತ್ರಿಕ ಸೇವಾ ಪೂರೈಕೆದಾರರಾಗಿರುವ 'ವಿವಾಮನಿ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್' ಗೆ ಸೇರಿದ ಡಿಜಿಟಲ್ ಅಪ್ಲಿಕೇಶನ್ ಆಗಿದ್ದು ಸಾಲಗಾರರಿಗೆ ಹಣವನ್ನು ವಿತ್‌ಡ್ರಾ ಮಾಡಲು, ಮರುಪಾವತಿ ಮಾಡಲು, ಪಾವತಿ ದಿನಾಂಕಗಳನ್ನು ಬದಲಾಯಿಸಲು ಮತ್ತು ಸಾಲ ನಿರ್ವಹಣೆಗೆ ಸಂಪೂರ್ಣ ಪ್ರವೇಶವನ್ನು ಒದಗಿಸುತ್ತದೆ. |
| **"Disbursal Schedule"** refers to the planned timeline and method by which the loan amount will be released to the Borrower. This schedule includes details on whether the loan will be disbursed 100% upfront or in a lump sum (full disbursement) or in stages (stage-wise disbursement), and the timing of these | **"ವಿತರಣಾ ವೇಳಾಪಟ್ಟಿ"** ಎಂದರೆ ಸಾಲಗಾರರಿಗೆ ಸಾಲದ ಮೊತ್ತವನ್ನು ಬಿಡುಗಡೆ ಮಾಡುವ ಯೋಜಿತ ಸಮಯ ಮತ್ತು ವಿಧಾನವನ್ನು ಹೊಂದಿರುವ ವೇಳಾಪಟ್ಟಿಯಾಗಿದೆ. ಈ ವೇಳಾಪಟ್ಟಿಯು ಸಾಲವನ್ನು 100% ಮುಂಗಡವಾಗಿ ವಿತರಿಸಲಾಗುತ್ತದೆಯೇ ಅಥವಾ ಒಂದೇ ಬಾರಿಗೆ (ಪೂರ್ಣ ವಿತರಣೆ) ಅಥವಾ ಹಂತಗಳಲ್ಲಿ (ಹಂತವಾರು ವಿತರಣೆ) ವಿತರಣೆ ಮಾಡಲಾಗುತ್ತದೆಯೇ ಎಂಬುದನ್ನು ಹಾಗೂ ಈ ವಿತರಣೆಗಳ ಸಮಯದ |

disbursements.

**“Due Date”** means in respect of:

(a) the Monthly Instalment and/or Outstanding Dues, the respective Repayment Dates;

(b) the interest on the Outstanding Dues, the Interest Payment Date; and

(c) any other amount payable under the Loan Documents, the date on which such amount falls due in terms of the Loan Documents, or on demand if the due date is not specified in such Loan Document;

**“Early Repayment/Foreclosure Charges”** means the additional, contingent amount payable by the Borrower to the Lender for repayment of the Outstanding Dues.

**“EMI reschedule Fee”** means the additional, contingent fee charged by the Lender from the Borrower, in case such service is selected by the Borrower during the repayment of the Loan.

**“Grace Period”** is the time period during which the Borrower can exit the Loan by repaying the principal amount and the proportionate APR without any penalty. The duration of

ವಿವರಗಳನ್ನು ಇದು ಒಳಗೊಂಡಿರುತ್ತದೆ.

**“ಗಡುವು ದಿನಾಂಕ”** ಎಂದರೆ:

(a) ಮಾಸಿಕ ಕಂತು ಮತ್ತು/ಅಥವಾ ಅವಧಿ ಮೀರಿದ ಬಾಕಿಗಳು, ಸಂಬಂಧಿತ ಮರುಪಾವತಿ ದಿನಾಂಕಗಳು;

(b) ಅವಧಿ ಮೀರಿದ ಬಾಕಿಗಳ ಮೇಲಿನ ಬಡ್ಡಿ, ಬಡ್ಡಿ ಪಾವತಿ ದಿನಾಂಕ; ಮತ್ತು

(c) ಸಾಲ ದಾಖಲೆಗಳ ಅಡಿಯಲ್ಲಿ ಪಾವತಿಸಬೇಕಾದ ಯಾವುದೇ ಇತರ ಮೊತ್ತ, ಸಾಲದ ದಾಖಲೆಗಳ ಪ್ರಕಾರ ಈ ಮೊತ್ತವನ್ನು ಯಾವ ದಿನಾಂಕದೊಳಗೆ ಪಾವತಿಸಬೇಕಾಗುತ್ತದೆ, ಅಥವಾ ಅಂತಹ ಸಾಲ ದಾಖಲೆಯಲ್ಲಿ ಗಡುವು ದಿನಾಂಕವನ್ನು ನಿರ್ದಿಷ್ಟಪಡಿಸದಿದ್ದರೆ ಬೇಡಿಕೆಯ ಮೇರೆಗೆ;

**"ಮುಂಚಿತ ಮರುಪಾವತಿ/ಸ್ವತ್ತುಮರುಸ್ವಾಧೀನ ಶುಲ್ಕಗಳು"** ಎಂದರೆ ಸಾಲಗಾರರು ಅವಧಿ ಮೀರಿದ ಬಾಕಿ ಮೊತ್ತಗಳನ್ನು ಮರುಪಾವತಿಸಲು ಸಾಲದಾತರಿಗೆ ಪಾವತಿಸಬೇಕಾದ ಹೆಚ್ಚುವರಿ, ಸಂಭವನೀಯ ಶುಲ್ಕವಾಗಿದೆ.

**"EMI ಮರುವೇಳಾಪಟ್ಟಿ ಶುಲ್ಕ"** ಎಂದರೆ ಸಾಲಗಾರರು ಸಾಲ ಮರುಪಾವತಿಯ ಸಮಯದಲ್ಲಿ ಈ ಸೇವೆಯನ್ನು ಆಯ್ದುಕೊಂಡರೆ ಸಾಲದಾತರು ಸಾಲಗಾರರಿಂದ ವಿಧಿಸುವ ಹೆಚ್ಚುವರಿ, ಆಕಸ್ಮಿಕ ಶುಲ್ಕ.

**"ರಿಯಾಯಿತಿ ಅವಧಿ"** ಎಂದರೆ ಸಾಲಗಾರರು ಯಾವುದೇ ದಂಡದ ಶುಲ್ಕವನ್ನು ಪಾವತಿಸದೇ ಅಸಲು ಮೊತ್ತ ಮತ್ತು ಅನುಪಾತದ APR ಅನ್ನು ಮರುಪಾವತಿಸುವ ಮೂಲಕ ಸಾಲದಿಂದ ಹೊರನಡೆಯುವ ಅವಧಿ. ರಿಯಾಯಿತಿ ಅವಧಿಯು 20 (ಇಪ್ಪತ್ತು) ರಿಂದ 51 (ಐವತ್ತೊಂದು) ದಿನಗಳವರೆಗೆ

| | |
|---|---|
| Grace Period will be 20 (twenty) to 51 (fifty-one) days. | ಇರುತ್ತದೆ. |
| **“First Grace Period”** refers to the Grace Period available to the Borrower for the first time after the execution of this Loan Agreement. | **"ಮೊದಲ ರಿಯಾಯಿತಿ ಅವಧಿ"** ಎಂದರೆ ಈ ಸಾಲ ಒಪ್ಪಂದವನ್ನು ಪ್ರಕ್ರಿಯೆಗೊಳಿಸಿದ ನಂತರ ಸಾಲಗಾರರಿಗೆ ಮೊದಲ ಬಾರಿಗೆ ನೀಡಲಾಗುವ ರಿಯಾಯಿತಿ ಅವಧಿ |
| **“Interest Rate”** means the rate of interest in relation to the Loan as mentioned in Schedule I, Sanction Letter and KFS; | **"ಬಡ್ಡಿ ದರ"** ಎಂದರೆ ಶೆಡ್ಯೂಲ್ I, ಮಂಜೂರಾತಿ ಪತ್ರ ಮತ್ತು KFS ನಲ್ಲಿ ಉಲ್ಲೇಖಿಸಿರುವಂತೆ ಸಾಲಕ್ಕೆ ಸಂಬಂಧಿಸಿದ ಬಡ್ಡಿ ದರ; |
| **“KFS”** means Key Fact Statement, as provided in Schedule I, to be issued by the Lender to the Borrower and shall inter-alia contain the details of APR, details of contingent charges and other disclosures like Cooling off/Look up period, details of Service Provider acting as recovery agent and authorized to approach the Borrower, details of Nodal Grievance Redressal Officer designated specifically to deal with FinTech/ digital lending related complaints/ issues etc; | **“KFS”** ಎಂದರೆ ಶೆಡ್ಯೂಲ್ I ರಲ್ಲಿ ಸಾಲದಾತರು ಸಾಲಗಾರರಿಗೆ ನೀಡಲಾಗುವ ಪ್ರಮುಖ ವಾಸ್ತವಾಂಶ ಹೇಳಿಕೆಯಾಗಿದೆ ಇದು ಇತರ ವಿಷಯಗಳ ಜೊತೆಗೆ APR ನ ವಿವರಗಳು ಮತ್ತು ಕೂಲಿಂಗ್ ಆಫ್/ಲುಕ್ ಅಪ್ ಅವಧಿಯ ಕುರಿತಾದ ವಿವರಗಳು, ಇತರ ಮಾಹಿತಿಗಳು, ವಸೂಲಾತಿ ಏಜೆಂಟ್ ಆಗಿ ಕೆಲಸ ಮಾಡುವ ಮತ್ತು ಸಾಲಗಾರರನ್ನು ಸಂಪರ್ಕಿಸಲು ಅಧಿಕಾರ ಹೊಂದಿರುವ ಸೇವಾ ಪೂರೈಕೆದಾರರ ವಿವರಗಳು, ಫಿನ್‌ಟೆಕ್/ಡಿಜಿಟಲ್ ಸಾಲ ಸಂಬಂಧಿತ ದೂರುಗಳು/ಸಮಸ್ಯೆಗಳನ್ನು ಬಗೆಹರಿಸಲು ನಿರ್ದಿಷ್ಟವಾಗಿ ಗೊತ್ತುಪಡಿಸಿದ ನೋಡಲ್ ಕುಂದುಕೊರತೆ ನಿವಾರಣಾ ಅಧಿಕಾರಿಯ ವಿವರಗಳು ಇತ್ಯಾದಿಗಳನ್ನು ಒಳಗೊಂಡಿರುತ್ತದೆ; |
| **“Limit Increasing Fee”** refers to the additional, contingent fee charged to the Borrower for consideration of the Borrower’s Loan application for a credit limit increase. The fee is chargeable even if the Borrower’s application is rejected by the Lender. | **"ಮಿತಿಯನ್ನು ಹೆಚ್ಚಿಸುವ ಶುಲ್ಕ"** ಎಂದರೆ ಸಾಲದ ಮಿತಿಯನ್ನು ಹೆಚ್ಚಿಸಲು ಸಾಲಗಾರರ ಸಾಲದ ಅರ್ಜಿಯನ್ನು ಪರಿಗಣಿಸುವುದಕ್ಕಾಗಿ ಸಾಲಗಾರರಿಗೆ ವಿಧಿಸಲಾಗುವ ಹೆಚ್ಚುವರಿ, ಸಂಭವನೀಯ ಶುಲ್ಕವಾಗಿದೆ. ಸಾಲದಾತರು ಸಾಲಗಾರರ ಅರ್ಜಿಯನ್ನು ತಿರಸ್ಕರಿಸಿದರೂ ಸಹ ಶುಲ್ಕ ವಿಧಿಸಲಾಗುತ್ತದೆ. |
| **“Loan amount"** means the loan amounts drawn down by the Borrower from the | **"ಸಾಲದ ಮೊತ್ತ"** ಎಂದರೆ ಈ ಒಪ್ಪಂದದ ಶೆಡ್ಯೂಲ್‌ನಲ್ಲಿ ನಿರ್ದಿಷ್ಟಪಡಿಸಿದಂತೆ ರಿವಾಲ್ವಿಂಗ್ ಕ್ರೆಡಿಟ್ ಲೈನ್‌ನ |

| | |
|---|---|
| Lender within the limits of the revolving credit line as specified in the Schedule of this Agreement. Provided that, where multiple drawdowns are permitted under a single Sanction Letter, the term "Loan" shall apply to each of these drawdowns singly and together and the Borrower's eligibility to make each drawdown will be subject to the Borrower satisfying the Company's credit policy as in force at the time of each drawdown. | ಮಿತಿಯೊಳಗೆ ಸಾಲಗಾರರು ಸಾಲದಾತರಿಂದ ಪಡೆದ ಸಾಲದ ಮೊತ್ತಗಳು. ಆದರೆ, ಒಂದೇ ಮಂಜೂರಾತಿ ಪತ್ರದ ಅಡಿಯಲ್ಲಿ ಅನೇಕ ಸಲ ಮೊತ್ತ ಪಡೆಯುವಿಕೆಯನ್ನು ಅನುಮತಿಸಿದರೆ, "ಸಾಲ" ಎಂಬ ಪದವು ಈ ಪ್ರತಿಯೊಂದು ಮೊತ್ತ ಪಡೆಯುವಿಕೆಗೆ ಪ್ರತ್ಯೇಕವಾಗಿ ಮತ್ತು ಒಟ್ಟಿಗೆ ಅನ್ವಯಿಸುತ್ತದೆ ಹಾಗೂ ಪ್ರತಿ ಮೊತ್ತ ಪಡೆಯುವಿಕೆಯನ್ನು ಮಾಡಲು ಸಾಲಗಾರರ ಅರ್ಹತೆಯು ಪ್ರತಿ ಮೊತ್ತ ಪಡೆಯುವಿಕೆಯ ಸಮಯದಲ್ಲಿ ಜಾರಿಯಲ್ಲಿರುವ ಕಂಪನಿಯ ಸಾಲದ ನೀತಿಯನ್ನು ಸಾಲಗಾರರು ಪೂರೈಸುವುದರ ಮೇಲೆ ಅವಲಂಬಿತವಾಗಿರುತ್ತದೆ. |
| **“Loan Application”** means the Loan application, in the form and manner provided and acceptable to the Lender together with such documents and information as may be required by the Lender, filled in and submitted by the Borrower to the Lender in relation to the Loan; | **"ಸಾಲ ಅರ್ಜಿ"** ಎಂದರೆ, ಸಾಲದಾತರಿಗೆ ಸ್ವೀಕಾರಾರ್ಹವಾದ ಸ್ವರೂಪ ಮತ್ತು ವಿಧಾನದಲ್ಲಿ, ಅವರಿಗೆ ಅಗತ್ಯವಿರುವ ದಾಖಲೆಗಳು ಮತ್ತು ಮಾಹಿತಿಯೊಂದಿಗೆ, ಸಾಲಕ್ಕೆ ಸಂಬಂಧಿಸಿದಂತೆ ಸಾಲಗಾರರು ಭರ್ತಿ ಮಾಡಿ ಸಾಲದಾತರಿಗೆ ಸಲ್ಲಿಸುವ ಅರ್ಜಿಯಾಗಿದೆ; |
| **“Loan Documents”** means collectively:<br>a. Loan Application<br>b. KFS<br>c. Sanction Letter<br>d. this Agreement and<br>e. any other document executed from time to time pursuant to any of the foregoing to which the Borrower or the Lender is a party. | **“ಸಾಲದ ದಾಖಲೆಗಳು”** ಎಂದರೆ ಒಟ್ಟಾರೆಯಾಗಿ:<br>a. ಸಾಲ ಅರ್ಜಿ<br>b. KFS<br>c. ಮಂಜೂರಾತಿ ಪತ್ರ<br>d. ಈ ಒಪ್ಪಂದ ಮತ್ತು<br>e. ಸಾಲಗಾರರು ಅಥವಾ ಸಾಲದಾತರು ಕಕ್ಷಿಯಾಗಿರುವ ಮೇಲಿನ ಯಾವುದೇ ವಿಷಯಕ್ಕೆ ಅನುಗುಣವಾಗಿ ಕಾಲಕಾಲಕ್ಕೆ ಕಾರ್ಯಗತಗೊಳಿಸಲಾಗುವ ಯಾವುದೇ ಇತರ ದಾಖಲೆ. |
| **“Optional Term Fee”** is the additional, contingent fee charged to the Borrowers based on the repayment | **"ಐಚ್ಛಿಕ ಅವಧಿ ಶುಲ್ಕ"** ಎಂದರೆ ಸಾಲಗಾರರು ಪಡೆಯುವ ಮರುಪಾವತಿ ಅವಧಿಯ ಆಧಾರದ ಮೇಲೆ ಸಾಲಗಾರರಿಗೆ ವಿಧಿಸಲಾಗುವ ಹೆಚ್ಚುವರಿ, ಸಂಭವನೀಯ ಶುಲ್ಕವಾಗಿದೆ, ಇದನ್ನು ಮೊದಲ EMI ಜೊತೆಗೆ |

term availed by the Borrower, to be payable with the first EMI. This fee is chargeable only in the event the Borrower fails to repay the Loan during the Grace Period.

"**Outstanding Dues**" means, at any point of time, all the amounts outstanding and payable or obligations to be performed by the Borrower to the Lender, pursuant to the terms of this Agreement and/or any other Loan Documents, including but not limited to the following:

a. the principal amount(s) of the Loan;
b. the interest on the Loan;
c. all other obligations and liabilities of the Borrower, indemnities, liquidated damages, costs, charges, expenses and other fees and interest incurred under, arising out of or in connection with this Agreement and/or any other Loan Documents (either severally or jointly); and
d. any and all expenses or sum incurred by the Lender for the enforcement of and collection of any amounts due under this Agreement and/or any other Loan Documents, including expenses of enforcement and realization;

ಪಾವತಿಸಬೇಕಾಗುತ್ತದೆ. ರಿಯಾಯಿತಿ ಅವಧಿಯಲ್ಲಿ ಸಾಲಗಾರರು ಸಾಲವನ್ನು ಮರುಪಾವತಿಸಲು ಸಾಧ್ಯವಾಗದಿದ್ದರೆ ಮಾತ್ರ ಈ ಶುಲ್ಕವನ್ನು ವಿಧಿಸಲಾಗುತ್ತದೆ.

**"ಅವಧಿ ಮೀರಿದ ಬಾಕಿಗಳು"** ಎಂದರೆ, ಯಾವುದೇ ಸಮಯದಲ್ಲಿಯಾದರೂ, ಈ ಒಪ್ಪಂದದ ಕರಾರುಗಳು ಮತ್ತು/ಅಥವಾ ಯಾವುದೇ ಇತರ ಸಾಲ ದಾಖಲೆಗಳ ಪ್ರಕಾರ, ಸಾಲಗಾರರು ಸಾಲದಾತರಿಗೆ ಪಾವತಿಸಲು ಬಾಕಿಯಿರುವ ಮತ್ತು ಪಾವತಿಸಬೇಕಾದ ಎಲ್ಲಾ ರೀತಿಯ ಮೊತ್ತ ಮತ್ತು ಬಾಧ್ಯತೆಗಳು, ಇವುಗಳನ್ನು ಒಳಗೊಂಡಿರುತ್ತದೆ ಆದರೆ ಇವುಗಳಿಗೆ ಮಾತ್ರ ಸೀಮಿತವಾಗಿಲ್ಲ:

a. ಸಾಲದ ಅಸಲು ಮೊತ್ತ(ಗಳು);
b. ಸಾಲದ ಮೇಲಿನ ಬಡ್ಡಿ;
c. ಸಾಲಗಾರರ ಎಲ್ಲಾ ಇತರ ಬಾಧ್ಯತೆಗಳು ಮತ್ತು ಜವಾಬ್ದಾರಿಗಳು, ಪರಿಹಾರ ಧನ, ದಿವಾಳಿಯಿಂದ ಆಗಿರುವ ಹಾನಿಗಳು, ವೆಚ್ಚಗಳು, ಶುಲ್ಕಗಳು, ಖರ್ಚುಗಳು ಮತ್ತು ಈ ಒಪ್ಪಂದ ಮತ್ತು/ಅಥವಾ ಯಾವುದೇ ಇತರ ಸಾಲ ದಾಖಲೆಗಳಿಂದ ಅಥವಾ ಅವುಗಳಿಗೆ ಸಂಬಂಧಿಸಿದಂತೆ ಉಂಟಾದ ಅಥವಾ ಉಂಟಾಗುವ ಇತರ ಶುಲ್ಕಗಳು ಮತ್ತು ಬಡ್ಡಿ (ಪ್ರತ್ಯೇಕವಾಗಿ ಅಥವಾ ಜಂಟಿಯಾಗಿ); ಮತ್ತು
d. ಈ ಒಪ್ಪಂದ ಮತ್ತು/ಅಥವಾ ಯಾವುದೇ ಇತರ ಸಾಲ ಸಂಬಂಧಿತ ದಾಖಲೆಗಳ ಅಡಿಯಲ್ಲಿ ಪಾವತಿಸಲು ಬಾಕಿ ಇರುವ ಯಾವುದೇ ಮೊತ್ತದ ವಸೂಲಾತಿ ಕ್ರಮ ಮತ್ತು ಸಂಗ್ರಹಿಸಲು ಸಾಲದಾತರು ಮಾಡಿದ ಯಾವುದೇ ವೆಚ್ಚ ಮತ್ತು ಎಲ್ಲಾ ರೀತಿಯ ವೆಚ್ಚಗಳು ಅಥವಾ ಜಾರಿಗೊಳಿಸಲು ಮತ್ತು

| | |
|---|---|
| | ವಸೂಲಾತಿಗೆ ಬೇಕಾದ ವೆಚ್ಚಗಳು ಸೇರಿದಂತೆ; |
| **“Penal Charge”** refers to the additional, contingent charge which is payable by the Borrower to the Lender as a penalty in case of default in repayment of the Monthly Instalments and/or Outstanding Dues by the Borrower, being charged on a cumulative basis; | **"ದಂಡ ಶುಲ್ಕ"** ಎಂದರೆ ಸಾಲಗಾರರು ಮಾಸಿಕ ಕಂತುಗಳು ಮತ್ತು/ಅಥವಾ ಅವಧಿ ಮೀರಿದ ಬಾಕಿಗಳನ್ನು ಮರುಪಾವತಿಸುವಲ್ಲಿ ವಿಫಲವಾದರೆ ದಂಡದ ರೂಪದಲ್ಲಿ ಸಾಲದಾತರಿಗೆ ಪಾವತಿಸಬೇಕಾದ ಹೆಚ್ಚುವರಿ, ಸಂಭವನೀಯ ಶುಲ್ಕವಾಗಿದ್ದು ಇದನ್ನು ಸಂಚಿತ ಆಧಾರದ ಮೇಲೆ ವಿಧಿಸಲಾಗುತ್ತದೆ; |
| **“Processing Fee”** refers to the fee charged to the Borrower at each disbursal, as per Schedule I. The fee is structured as: (1) **1st Month of Withdrawal,** refers to the calendar month in which the Borrower makes the first withdrawal, regardless of the specific date (e.g., if the first withdrawal is on November 28, the month of November is considered the 1st Month), and (2) **Subsequent Withdrawals,** refer to withdrawals made in the calendar months following the First Month. The fee structure applies to all withdrawals, irrespective of the number of tranches, and the fee shall be deducted at the time of each withdrawal. | **"ಪ್ರಕ್ರಿಯಾ ಶುಲ್ಕ"** ಎಂದರೆ, ಶೆಡ್ಯೂಲ್ I ರ ಪ್ರಕಾರ, ಪ್ರತಿ ವಿತರಣೆಯಲ್ಲಿ ಸಾಲಗಾರರಿಗೆ ವಿಧಿಸಲಾಗುವ ಶುಲ್ಕ. ಇದನ್ನು ಈ ಕೆಳಗಿನ ರೀತಿಯಲ್ಲಿ ರಚಿಸಲಾಗುತ್ತದೆ: (1) **1 ನೇ ತಿಂಗಳ ವಿತ್‌ಡ್ರಾವಲ್** ಎಂದರೆ ನಿರ್ದಿಷ್ಟ ದಿನಾಂಕವನ್ನು ಪರಿಗಣಿಸದೆ ಸಾಲಗಾರರು ಮೊದಲು ವಿತ್‌ಡ್ರಾವಲ್ ಮಾಡುವ ಕ್ಯಾಲೆಂಡರ್ ತಿಂಗಳನ್ನು ಸೂಚಿಸುತ್ತದೆ, (ಉದಾ., ಮೊದಲ ವಿತ್‌ಡ್ರಾವಲ್ ನವೆಂಬರ್ 28 ರಂದು ಆಗಿದ್ದರೆ, ನವೆಂಬರ್ ತಿಂಗಳನ್ನು 1 ನೇ ತಿಂಗಳು ಎಂದು ಪರಿಗಣಿಸಲಾಗುತ್ತದೆ) ಮತ್ತು (2) **ನಂತರದ ವಿತ್‌ಡ್ರಾವಲ್‌ಗಳು,** ಮೊದಲ ತಿಂಗಳ ನಂತರದ ಕ್ಯಾಲೆಂಡರ್ ತಿಂಗಳುಗಳಲ್ಲಿ ಮಾಡಿದ ವಿತ್‌ಡ್ರಾವಲ್‌ಗಳನ್ನು ಉಲ್ಲೇಖಿಸುತ್ತದೆ. ಶುಲ್ಕ ರಚನೆಯು, ಕಂತುಗಳ ಸಂಖ್ಯೆಯನ್ನು ಲೆಕ್ಕಿಸದೆ ಎಲ್ಲಾ ವಿತ್‌ಡ್ರಾವಲ್‌ಗಳಿಗೆ ಅನ್ವಯಿಸುತ್ತದೆ, ಮತ್ತು ಪ್ರತಿ ವಿತ್‌ಡ್ರಾವಲ್ ಸಮಯದಲ್ಲಿ ಶುಲ್ಕವನ್ನು ಕಡಿತಗೊಳಿಸಲಾಗುತ್ತದೆ. |
| **“Repayment Date”** | **ಮರುಪಾವತಿ ದಿನಾಂಕ** |
| a. in relation to the Monthly Instalments, means the date, on or before which each Monthly Instalment is to be repaid by the Borrower, commencing from the date of the | a. ಮಾಸಿಕ ಕಂತುಗಳಿಗೆ ಸಂಬಂಧಿಸಿದಂತೆ, ಸಾಲಗಾರರು ಪ್ರತಿ ಮಾಸಿಕ ಕಂತನ್ನು ಮರುಪಾವತಿಸಬೇಕಾದ ದಿನಾಂಕ ಅಥವಾ ಆ ನಿರ್ದಿಷ್ಟ ದಿನಾಂಕಕ್ಕಿಂತ ಮೊದಲಿನ ದಿನಗಳನ್ನು ಸೂಚಿಸುತ್ತದೆ ಹಾಗೂ ಇದು |

| | |
|---|---|
| disbursement of Loan or the date on which the Loan is booked by the Lender in the name of the Borrower in the Lender's books, whichever is earlier; and<br>b. in relation to the Outstanding Dues means the date, on or before which, the entire Outstanding Dues is to be repaid by the Borrower; | ಸಾಲ ವಿತರಣೆಯ ದಿನಾಂಕದಿಂದ ಅಥವಾ ಸಾಲದಾತರು ಸಾಲಗಾರರ ಹೆಸರಿನಲ್ಲಿ ಸಾಲವನ್ನು ನಿಗದಿಪಡಿಸಿದ ದಿನಾಂಕದಿಂದ, ಯಾವುದು ಮೊದಲೋ ಅದನ್ನು ಪರಿಗಣಿಸಲಾಗುತ್ತದೆ; ಮತ್ತು<br>b. ಅವಧಿ ಮೀರಿದ ಬಾಕಿಗಳಿಗೆ ಸಂಬಂಧಿಸಿದಂತೆ, ಸಾಲಗಾರರು ಸಂಪೂರ್ಣ ಅವಧಿ ಮೀರಿದ ಬಾಕಿಯನ್ನು ಪಾವತಿಸಬೇಕಾದ ದಿನಾಂಕ ಅಥವಾ ಆ ದಿನಾಂಕಕ್ಕಿಂತ ಮೊದಲು ಎಂದರ್ಥ; |
| **"RBI"** means the Reserve Bank of India; | **"RBI"** ಎಂದರೆ ಭಾರತೀಯ ರಿಸರ್ವ್ ಬ್ಯಾಂಕ್. |
| "**Revolving Credit Line"** is the credit limit which is sanctioned and available to the Borrower by the Lender and the Borrower is entitled to advance, repay and readvance the amount under the credit limit, from time to time, subject to the terms & conditions mentioned in this Agreement, provided that the utilized credit limit which is unpaid shall not exceed the Sanctioned Loan Limit, at any given point of time. | **"ರಿವಾಲ್ವಿಂಗ್ ಕ್ರೆಡಿಟ್ ಲೈನ್"** ಎಂಬುದು ಸಾಲದಾತರು ಸಾಲಗಾರರಿಗೆ ಮಂಜೂರು ಮಾಡಿದ ಮತ್ತು ಲಭ್ಯವಿರುವ ಸಾಲದ ಮಿತಿಯಾಗಿದೆ ಮತ್ತು ಸಾಲಗಾರರು ಈ ಒಪ್ಪಂದದಲ್ಲಿ ಉಲ್ಲೇಖಿಸಲಾದ ಕರಾರುಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಕಾಲಕಾಲಕ್ಕೆ ಸಾಲದ ಮಿತಿಯ ಅಡಿಯಲ್ಲಿ ಮೊತ್ತವನ್ನು ಮುಂಗಡವಾಗಿ ನೀಡಲು, ಮರುಪಾವತಿಸಲು ಮತ್ತು ಮರುಮುಂಗಡವಾಗಿ ಪಾವತಿಸಲು ಅರ್ಹರಾಗಿರುತ್ತಾರೆ, ಆದರೆ ಪಾವತಿಸದೇ ಇರುವ ಬಳಸಿದ ಸಾಲದ ಮಿತಿಯು ಯಾವುದೇ ಸಮಯದಲ್ಲಿಯೂ ಮಂಜೂರಾದ ಸಾಲ ಮಿತಿಯನ್ನು ಮೀರಬಾರದು. |
| **"Sanction Letter"** means the letter, as provided in Schedule I, issued by the Lender sanctioning the Loan along with the relevant particulars, terms and conditions mentioned in the same; | **"ಮಂಜೂರಾತಿ ಪತ್ರ"** ಎಂದರೆ, ಶೆಡ್ಯೂಲ್ I ರಲ್ಲಿ ಒದಗಿಸಲಾದ ಪತ್ರವಾಗಿದ್ದು ಇದರಲ್ಲಿ ಸಾಲದಾತರು ಸಾಲವನ್ನು ಮಂಜೂರು ಮಾಡುವ ಸಮಯದಲ್ಲಿ ನೀಡಿದ ಪತ್ರ ಮತ್ತು ಇದು ಸಂಬಂಧಿತ ವಿವರಗಳು, ಕರಾರುಗಳು ಮತ್ತು ಷರತ್ತುಗಳನ್ನು ಒಳಗೊಂಡಿರುತ್ತದೆ; |
| **"Sanctioned Loan Limit"** means the maximum Loan | **"ಮಂಜೂರಾದ ಸಾಲದ ಮಿತಿ"** ಎಂದರೆ ಸಾಲಗಾರರು ಸಾಲದಾತರಿಂದ ಪಡೆಯುವ |

| | |
|---|---|
| amount that Borrower can take from the Lender. | ಗರಿಷ್ಠ ಸಾಲ ಮೊತ್ತ. |
| **"SMS Charge"** means the monthly contingent fee payable by the Borrower for subscribing to the SMS notification service, which includes without limitation, alerts for deposits, payment reminders, repayment notifications, and updates for transfer of money to external account ("SMS Service"). This charge applies solely when the Borrower opts-in for this service and may be discontinued by the Borrower at any time. | **"SMS ಶುಲ್ಕ"** ಎಂದರೆ ಸಾಲಗಾರರು SMS ನೋಟಿಫಿಕೇಶನ್ ಸೇವೆಗೆ ಚಂದಾದಾರರಾಗಲು ಪಾವತಿಸಬೇಕಾದ ಮಾಸಿಕ ಸಂಭವನೀಯ ಶುಲ್ಕ, ಇದಕ್ಕೆ ನಿರ್ದಿಷ್ಟ ಮಿತಿಯಿಲ್ಲದೆ ಠೇವಣಿಗಳಿಗೆ ಸಂಬಂಧಿಸಿದ ಅಲರ್ಟ್‌ಗಳು, ಪಾವತಿ ಜ್ಞಾಪನೆಗಳು, ಮರುಪಾವತಿ ನೋಟಿಫಿಕೇಶನ್‌ಗಳು ಮತ್ತು ಬಾಹ್ಯ ಖಾತೆಗೆ ಹಣ ವರ್ಗಾವಣೆಯ ಅಪ್‌ಡೇಟ್‌ಗಳು ("SMS ಸೇವೆ") ಸೇರಿವೆ. ಸಾಲಗಾರರು ಈ ಸೇವೆಯನ್ನು ಆಯ್ದುಕೊಂಡಾಗ ಮಾತ್ರ ಈ ಶುಲ್ಕ ಅನ್ವಯಿಸುತ್ತದೆ ಮತ್ತು ಸಾಲಗಾರರು ಯಾವುದೇ ಸಮಯದಲ್ಲಿ ಇದನ್ನು ನಿಲ್ಲಿಸಬಹುದು. |
| **"Tenor of Loan"** shall mean the tenure of the Loan as specified in Key Fact Statement (KFS) and any extension of the Loan provided by the Lender to the Borrower. | **"ಸಾಲದ ಅವಧಿ"** ಎಂದರೆ ಪ್ರಮುಖ ವಾಸ್ತವಾಂಶ ಹೇಳಿಕೆಯಲ್ಲಿ (KFS) ತಿಳಿಸಿದಂತೆ ಸಾಲದ ಅವಧಿ ಮತ್ತು ಸಾಲದಾತರು ಸಾಲಗಾರರಿಗೆ ಒದಗಿಸುವ ಸಾಲದ ಅವಧಿಯ ವಿಸ್ತರಣೆ. |
| **"Website"** means the website of the Lender, presently being **www.fincfriends.com**; | **"ವೆಬ್‌ಸೈಟ್"** ಎಂದರೆ ಸಾಲದಾತರ ವೆಬ್‌ಸೈಟ್, ಪ್ರಸ್ತುತ ಇದು **www.fincfriends.com** ಆಗಿದೆ; |
| 1.2 **Interpretation** | 1.2 **ವ್ಯಾಖ್ಯಾನ** |
| (i) Unless the context otherwise requires, words denoting the singular shall include the plural and vice versa; | (i) ಬೇರೆ ರೀತಿಯಲ್ಲಿ ಅಗತ್ಯವಿರದ ಸಂದರ್ಭವನ್ನು ಹೊರತುಪಡಿಸಿದರೆ, ಏಕವಚನವನ್ನು ಸೂಚಿಸುವ ಪದಗಳು ಬಹುವಚನದ ಅರ್ಥವನ್ನು ಸಹ ಒಳಗೊಂಡಿರುತ್ತವೆ ಮತ್ತು ಬಹುವಚನವನ್ನು ಸೂಚಿಸುವ ಪದಗಳು ಏಕವಚನದ ಅರ್ಥಗಳನ್ನು ಒಳಗೊಂಡಿರುತ್ತವೆ; |
| (ii) the table of contents, headings and the use of bold typeface, are inserted for ease of reference and shall be | (ii) ವಿಷಯಗಳ ಟೇಬಲ್, ಶೀರ್ಷಿಕೆಗಳು ಮತ್ತು ದಪ್ಪ ಅಕ್ಷರದ |

| | |
|---|---|
| ignored in the construction and interpretation of the Agreement; | ಬಳಕೆಯನ್ನು ಉಲ್ಲೇಖವನ್ನು ಸುಲಭಗೊಳಿಸಲು ಸೇರಿಸಲಾಗಿದೆ ಮತ್ತು ಒಪ್ಪಂದದ ರಚನೆ ಮತ್ತು ವ್ಯಾಖ್ಯಾನದಲ್ಲಿ ನಿರ್ಲಕ್ಷಿಸಲಾಗುತ್ತದೆ; |
| a reference to a Clause or Schedule is, unless indicated to the contrary, a reference to a Clause or Schedule to this Agreement; | ಒಂದು ಷರತ್ತು ಅಥವಾ ಶೆಡ್ಯೂಲ್‌ನ ಉಲ್ಲೇಖವು, ವಿರುದ್ಧ ಅರ್ಥವನ್ನು ಸೂಚಿಸದ ಹೊರತು, ಈ ಒಪ್ಪಂದದ ಷರತ್ತು ಅಥವಾ ಶೆಡ್ಯೂಲ್ ಆಗಿರುತ್ತದೆ; |
| (iii) references to this Agreement shall be construed as references also to any separate or independent stipulation or agreement contained in it; | (iii) ಈ ಒಪ್ಪಂದದ ಉಲ್ಲೇಖಗಳನ್ನು ಅದರಲ್ಲಿ ಒಳಗೊಂಡಿರುವ ಯಾವುದೇ ಪ್ರತ್ಯೇಕ ಅಥವಾ ಸ್ವತಂತ್ರ ಷರತ್ತು ಅಥವಾ ಒಪ್ಪಂದದ ಉಲ್ಲೇಖಗಳೆಂದು ಅರ್ಥೈಸಿಕೊಳ್ಳಬೇಕು; |
| (iv) references to the word ‘includes’ or ‘including’ shall be construed without limitation; and | (iv) 'ಒಳಗೊಂಡಿದೆ' ಅಥವಾ 'ಸೇರಿಸಲಾಗಿದೆ' ಎಂಬ ಪದವನ್ನು ಉಲ್ಲೇಖಿಸಿದಾಗ ಮಿತಿಯಿಲ್ಲದೆ ಎಂದು ಅರ್ಥೈಸಿಕೊಳ್ಳಬೇಕು; ಮತ್ತು |
| (v) words importing a particular gender include all genders. | (v) ನಿರ್ದಿಷ್ಟ ಲಿಂಗವನ್ನು ಉಲ್ಲೇಖಿಸುವ ಪದಗಳು ಎಲ್ಲಾ ಲಿಂಗಗಳನ್ನು ಅರ್ಥೈಸುತ್ತವೆ |
| **2. SANCTION & LOAN DISBURSAL** | **2. ಮಂಜೂರಾತಿ ಮತ್ತು ಸಾಲ ವಿತರಣೆ** |
| 2.1 Relying upon the statements and representations made by the Borrower in the Loan Application, the Lender has sanctioned the Revolving Credit Line facility and does hereby agrees to disburse Loan to the Borrower up to a maximum amount as set out in Schedule I; | 2.1 ಸಾಲ ಅರ್ಜಿಯಲ್ಲಿ ಸಾಲಗಾರರು ಮಾಡಿದ ಹೇಳಿಕೆಗಳು ಮತ್ತು ಪ್ರಾತಿನಿಧ್ಯಗಳನ್ನು ಅವಲಂಬಿಸಿ, ಸಾಲದಾತರು ರಿವಾಲ್ವಿಂಗ್ ಕ್ರೆಡಿಟ್ ಲೈನ್ ಸೌಲಭ್ಯವನ್ನು ಮಂಜೂರು ಮಾಡಿರುತ್ತಾರೆ ಮತ್ತು ಶೆಡ್ಯೂಲ್ I ರಲ್ಲಿ ತಿಳಿಸಿದಂತೆ ಗರಿಷ್ಠ ಮೊತ್ತದವರೆಗೆ ಸಾಲವನ್ನು ವಿತರಿಸಲು ಈ ಮೂಲಕ ಒಪ್ಪುತ್ತಾರೆ; |
| 2.2 The disbursement of the Loan shall be made directly | 2.2 ಸಾಲದ ವಿತರಣೆಯನ್ನು ನೇರವಾಗಿ ಸಾಲಗಾರರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ, ಸಾಲದ ಅರ್ಜಿಯ ಸಮಯದಲ್ಲಿ |

| | |
|---|---|
| in the bank account of the Borrower, details of which have been provided by the Borrower to the Lender at the time of Loan Application; | ಸಾಲದಾತರಿಗೆ ಒದಗಿಸಲಾದ ವಿವರಗಳನ್ನು ನೀಡಲಾಗುತ್ತದೆ; |
| 2.3 Unless the Sanction Letter is unconditionally accepted by the Borrower, the Lender does not undertake any obligation to allow the Borrower to avail the Loan even if sanctioned. | 2.3 ಸಾಲಗಾರರು ಮಂಜೂರಾತಿ ಪತ್ರವನ್ನು ಯಾವುದೇ ಷರತ್ತಿಲ್ಲದೇ ಸ್ವೀಕರಿಸದ ಹೊರತು, ಸಾಲ ಮಂಜೂರಾಗಿದ್ದರೂ ಸಹ ಸಾಲವನ್ನು ಪಡೆಯಲು ಅವಕಾಶ ನೀಡುವ ಯಾವುದೇ ಬಾಧ್ಯತೆಯನ್ನು ಸಾಲದಾತರು ತೆಗೆದುಕೊಳ್ಳುವುದಿಲ್ಲ. |
| 2.4 Borrower hereby irrevocably understand, agree and confirm that every Loan request made by the Borrower shall be assessed individually by the Lender at its sole discretion and the final disbursement of Loan amount shall be based on the Lender’s internal policies and eligibility criteria applicable to the Borrower. | 2.4 ಸಾಲಗಾರರು ಮಾಡುವ ಪ್ರತಿಯೊಂದು ಸಾಲ ವಿನಂತಿಯನ್ನು ಸಾಲದಾತರು ತಮ್ಮ ಸ್ವಂತ ವಿವೇಚನೆಯ ಅಡಿಯಲ್ಲಿ ಪ್ರತ್ಯೇಕವಾಗಿ ನಿರ್ಣಯಿಸುತ್ತಾರೆ ಮತ್ತು ಸಾಲದ ಮೊತ್ತದ ಅಂತಿಮ ವಿತರಣೆಯು ಸಾಲದಾತರ ಆಂತರಿಕ ನೀತಿಗಳು ಮತ್ತು ಸಾಲಗಾರರ ಅರ್ಹತಾ ಮಾನದಂಡಗಳ ಮೇಲೆ ಆಧಾರಿತವಾಗಿರುತ್ತದೆ ಎಂದು ಸಾಲಗಾರರು ಈ ಮೂಲಕ ಬೇಷರತ್ತಾಗಿ ಅರ್ಥಮಾಡಿಕೊಳ್ಳುತ್ತಾರೆ, ಒಪ್ಪುತ್ತಾರೆ ಮತ್ತು ದೃಢೀಕರಿಸುತ್ತಾರೆ. |
| 2.5 The Borrower hereby irrevocably agree and undertake that every amount credited in the bank account of the Borrower by the Lender shall be deemed to be an acknowledgement and acceptance of Loan availed by the Borrower from the Lender. | 2.5 ಸಾಲದಾತರು ಸಾಲಗಾರರ ಬ್ಯಾಂಕ್ ಖಾತೆಗೆ ಜಮಾ ಮಾಡುವ ಪ್ರತಿಯೊಂದು ಮೊತ್ತವನ್ನು ಸಾಲದಾತರಿಂದ ಪಡೆದ ಸಾಲದ ಸ್ವೀಕೃತಿ ಮತ್ತು ಸಮ್ಮತಿ ಎಂದು ಪರಿಗಣಿಸಲಾಗುತ್ತದೆ ಎಂದು ಸಾಲಗಾರರು ಈ ಮೂಲಕ ಬೇಷರತ್ತಾಗಿ ಒಪ್ಪುತ್ತಾರೆ ಮತ್ತು ಪ್ರತಿಜ್ಞೆ ಮಾಡುತ್ತಾರೆ. |
| 2.6 The disbursement of Sanctioned Loan Limit (full or partial) is dependent on the method chosen by the Borrower, which may be one of the following options: (i) a full disbursement of 100% of the Sanctioned Loan Limit, or (ii) a stage-wise disbursement, where the | 2.6 ಮಂಜೂರಾದ ಸಾಲದ ಮಿತಿಯ ವಿತರಣೆಯು (ಪೂರ್ಣ ಅಥವಾ ಭಾಗಶಃ) ಸಾಲಗಾರರು ಆಯ್ದುಕೊಂಡ ವಿಧಾನವನ್ನು ಅವಲಂಬಿಸಿರುತ್ತದೆ, ಇದು ಈ ಕೆಳಗಿನ ಆಯ್ಕೆಗಳಲ್ಲಿ ಯಾವುದಾದರೂ ಒಂದಾಗಿರಬಹುದು: (i) ಮಂಜೂರಾದ ಸಾಲ ಮಿತಿಯ 100% ಸಂಪೂರ್ಣ ವಿತರಣೆ, ಅಥವಾ (ii) ಸಾಲಗಾರರ ಕೋರಿಕೆಯ ಮೇರೆಗೆ ರಿವಾಲ್ವಿಂಗ್ ಕ್ರೆಡಿಟ್ ಮಿತಿಯನ್ನು ಅನೇಕ ಕಂತುಗಳಲ್ಲಿ ವಿತರಿಸುವ |

Revolving credit limit is released in multiple instalments as per Borrower's request. Therefore, the disbursal schedule cannot be included in the Key Fact Statement (KFS) provided to the Borrower.

ಹಂತವಾರು ವಿತರಣೆ. ಇದೇ ಕಾರಣಕ್ಕಾಗಿ, ಸಾಲಗಾರರಿಗೆ ಒದಗಿಸಿದ ಪ್ರಮುಖ ವಾಸ್ತವಾಂಶ ಹೇಳಿಕೆಯು (KFS) ವಿತರಣಾ ವೇಳಾಪಟ್ಟಿಯನ್ನು ಒಳಗೊಂಡಿರುವುದಿಲ್ಲ.

**3. COOLING OFF/ LOOK-UP PERIOD**

3.1 Post disbursement of Loan, the Borrower shall within a period equal to the 1st (first) Grace Period from the date of disbursement of Loan by the Lender, have the option to exit the Loan by paying the principal Loan amount and the proportionate APR without any penalty. However, if the Borrower opts not to exit the Loan in this period or fails to exit the Loan if intends to do so, then the Borrower shall be responsible and liable to comply with all the terms and conditions of this Agreement as a Borrower;

3.2 If the Borrower continues with the Loan even after the Cooling off/ look-up period, then the Borrower will still have the option for foreclosure and early repayment of the Loan, subject to payment of all applicable interest and charges outstanding to be payable by the Borrower.

**3. ಕೂಲಿಂಗ್ ಆಫ್/ಲುಕ್-ಅಪ್ ಅವಧಿ**

3.1 ಸಾಲ ವಿತರಣೆಯ ನಂತರ, ಸಾಲದಾತರು ಸಾಲ ವಿತರಣೆಯ ದಿನಾಂಕದಿಂದ 1 ನೇ (ಮೊದಲ) ರಿಯಾಯಿತಿ ಅವಧಿಗೆ ಸಮಾನವಾದ ಅವಧಿಯೊಳಗೆ, ಯಾವುದೇ ದಂಡವಿಲ್ಲದೆ ಸಾಲದ ಅಸಲು ಮೊತ್ತ ಮತ್ತು ಅನುಪಾತದ APR ಅನ್ನು ಪಾವತಿಸುವ ಮೂಲಕ ಸಾಲದಿಂದ ವಾಪಸಾಗುವ ಆಯ್ಕೆಯನ್ನು ಹೊಂದಿರುತ್ತಾರೆ. ಆದಾಗ್ಯೂ, ಸಾಲಗಾರರು ಈ ಅವಧಿಯಲ್ಲಿ ಸಾಲದಿಂದ ವಾಪಸಾಗದೇ ಇರಲು ನಿರ್ಧರಿಸಿದರೆ ಅಥವಾ ಸಾಲದಿಂದ ವಾಪಸಾಗಲು ಬಯಸಿದರೂ ಹಾಗೆ ಮಾಡಲು ಸಾಧ್ಯವಾಗದೇ ಇದ್ದರೆ, ಸಾಲಗಾರರು ಒಬ್ಬ ಸಾಲಗಾರರಾಗಿ ಈ ಒಪ್ಪಂದದ ಎಲ್ಲಾ ಕರಾರುಗಳು ಮತ್ತು ಷರತ್ತುಗಳನ್ನು ಪಾಲಿಸುವ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಹೊಂದಿರುತ್ತಾರೆ.

3.2 ಕೂಲಿಂಗ್ ಆಫ್/ಲುಕ್-ಅಪ್ ಅವಧಿಯ ನಂತರವೂ ಸಾಲಗಾರರು ಸಾಲವನ್ನು ಮುಂದುವರಿಸಿದರೆ, ಸಾಲಗಾರರು ಸಾಲವನ್ನು ಸ್ವತ್ತುಮರುಸ್ವಾಧೀನ ಮತ್ತು ಆರಂಭಿಕ ಮರುಪಾವತಿಯನ್ನು ಆಯ್ದುಕೊಳ್ಳಬಹುದಾಗಿದ್ದು, ಇದು ಸಾಲಗಾರರು ಪಾವತಿಸಬೇಕಾದ ಅನ್ವಯವಾಗುವ ಎಲ್ಲಾ ಬಡ್ಡಿ ಮತ್ತು ಬಾಕಿ ಶುಲ್ಕಗಳ ಪಾವತಿಯನ್ನು ಸಹ ಒಳಪಟ್ಟಿರುತ್ತದೆ.

| | |
|---|---|
| **4. PAYMENT AND EARLY REPAYMENT** | **4. ಪಾವತಿ ಮತ್ತು ಆರಂಭಿಕ ಮರುಪಾವತಿ** |
| 4.1 The Borrower shall pay the Outstanding Dues on the Repayment Date as mentioned in the Schedule or within the Grace Period, whichever event is applicable. Borrower understands that its obligations under this Agreement shall be valid and binding, until the repayment of the Outstanding Dues, to the satisfaction of the Lender. The Borrower acknowledges that strict compliance to the repayment schedule is an essential condition for grant of the Loan and that time is the essence of this agreement. | 4.1 ಸಾಲಗಾರರು ಅವಧಿ ಮೀರಿದ ಬಾಕಿ ಮೊತ್ತಗಳನ್ನು ವೇಳಾಪಟ್ಟಿಯಲ್ಲಿ ಉಲ್ಲೇಖಿಸಿರುವ ಮರುಪಾವತಿ ದಿನಾಂಕದಂದು ಅಥವಾ ರಿಯಾಯಿತಿ ಅವಧಿಯೊಳಗೆ, ತಮಗೆ ಯಾವ ಸಮಯವು ಅನ್ವಯಿಸುತ್ತದೆಯೋ ಆ ಸಮಯದೊಳಗೆ ಪಾವತಿಸಬೇಕು. ಸಾಲದಾತರು ಸಮಾಧಾನಗೊಳ್ಳುವವರೆಗೆ, ಅವಧಿ ಮೀರಿದ ಬಾಕಿಗಳನ್ನು ಸಾಲಗಾರರು ಮರುಪಾವತಿಸುವವರೆಗೆ, ಈ ಒಪ್ಪಂದದ ಅಡಿಯಲ್ಲಿ ತಮ್ಮ ಹೊಣೆಗಾರಿಕೆಗಳು ಮಾನ್ಯವಾಗಿರುತ್ತವೆ ಮತ್ತು ಬಾಧ್ಯತಾ ಪರಿಣಾಮಗಳನ್ನು ಹೊಂದಿರುತ್ತವೆ ಎಂದು ಸಾಲಗಾರರು ಅರ್ಥಮಾಡಿಕೊಳ್ಳುತ್ತಾರೆ. ಸಾಲ ಮಂಜೂರಾತಿಗೆ ಮರುಪಾವತಿ ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಅತ್ಯಗತ್ಯವಾಗಿರುವ ಷರತ್ತಾಗಿದೆ ಮತ್ತು ಅವಧಿಯು ಈ ಒಪ್ಪಂದದ ಸಾರವಾಗಿದೆ ಎಂದು ಸಾಲಗಾರರು ಒಪ್ಪಿಕೊಳ್ಳುತ್ತಾರೆ. |
| 4.2 The Borrower can repay the Outstanding Dues with respect to the Loan, in full during the Grace Period through the mode of Debit Card/Net-banking/Unified Payments Interface (UPI). | 4.2 ಸಾಲಗಾರರು ಸಾಲಕ್ಕೆ ಸಂಬಂಧಿಸಿದಂತೆ ಅವಧಿ ಮೀರಿತ ಬಾಕಿಯಿರುವ ಮೊತ್ತಗಳನ್ನು, ರಿಯಾಯಿತಿ ಅವಧಿಯಲ್ಲಿ ಡೆಬಿಟ್ ಕಾರ್ಡ್/ನೆಟ್-ಬ್ಯಾಂಕಿಂಗ್/ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (UPI) ಮೂಲಕ ಸಂಪೂರ್ಣವಾಗಿ ಮರುಪಾವತಿಸಬಹುದು. |
| 4.3 In case of death or insolvency of the Borrower, as applicable, the outstanding Loan along with Interest, default interest and the Charges will be recovered from his/her/its legal heir/s, legal representative/s, executor/s, administrator/s). | 4.3 ಸಾಲಗಾರರು ಮರಣ ಹೊಂದಿದರೆ ಅಥವಾ ದಿವಾಳಿಯಾದ ಸಂದರ್ಭದಲ್ಲಿ, ಬಾಕಿ ಇರುವ ಸಾಲವನ್ನು ಬಡ್ಡಿ, ಡೀಫಾಲ್ಟ್ ಬಡ್ಡಿ ಮತ್ತು ಶುಲ್ಕಗಳ ಜೊತೆಗೆ ಅವರ ಕಾನೂನುಬದ್ಧ ಉತ್ತರಾಧಿಕಾರಿ/ಗಳು, ಕಾನೂನು ಪ್ರತಿನಿಧಿ/ಗಳು, ಕಾರ್ಯನಿರ್ವಾಹಕ/ರಿಂದ, ಅನ್ವಯವಾಗುವಂತೆ ವಸೂಲಿ ಮಾಡಲಾಗುತ್ತದೆ. |
| 4.4 The Borrower agrees that the payment of all the | 4.4 ಈ ಒಪ್ಪಂದದ ಅಡಿಯಲ್ಲಿ |

| | |
|---|---|
| amount due to Lender under this Agreement can always be enforced against the Borrowers estate and assets and this Agreement shall be binding upon heirs, executors, legal representatives, and administrators of the Borrowers. | ಸಾಲದಾತರಿಗೆ ಪಾವತಿಗೆ ಬಾಕಿಯಿರುವ ಎಲ್ಲಾ ಮೊತ್ತದ ಪಾವತಿಯನ್ನು ಯಾವಾಗಲೂ ಸಾಲಗಾರರ ಎಸ್ಟೇಟ್ ಮತ್ತು ಸ್ವತ್ತುಗಳ ಪರವಾಗಿ ಜಾರಿಗೊಳಿಸಬಹುದು ಮತ್ತು ಈ ಒಪ್ಪಂದವು ಸಾಲಗಾರರ ಉತ್ತರಾಧಿಕಾರಿಗಳು, ಕಾರ್ಯನಿರ್ವಾಹಕರು, ಕಾನೂನು ಪ್ರತಿನಿಧಿಗಳು ಮತ್ತು ಆಡಳಿತಗಾರರ ಮೇಲೆ ಬಾಧ್ಯತಾ ಪರಿಣಾಮವನ್ನು ಹೊಂದಿರುತ್ತದೆ ಎಂದು ಸಾಲಗಾರರು ಒಪ್ಪುತ್ತಾರೆ. |
| 4.5 The Borrower can apply/request for Early Repayment/Foreclosure and change of EMI schedule approval of which is the sole discretion of the Lender. | 4.5 ಸಾಲಗಾರರು ಆರಂಭಿಕ ಮರುಪಾವತಿ/ಸ್ವತ್ತುಮರುಸ್ವಾಧೀನ ಮತ್ತು EMI ವೇಳಾಪಟ್ಟಿಯ ಬದಲಾವಣೆಗೆ ಅರ್ಜಿ ಸಲ್ಲಿಸಬಹುದು/ವಿನಂತಿಸಬಹುದಾಗಿದ್ದು, ಇದು ಸಂಪೂರ್ಣವಾಗಿ ಸಾಲದಾತರ ಸ್ವಂತ ವಿವೇಚನೆಗೆ ಬಿಟ್ಟ ವಿಷಯವಾಗಿದೆ. |
| 4.6 If the Borrower makes an Advance EMI payment, the available Revolving Credit Line and Outstanding Dues will be updated on the upcoming due date. Further, the Borrower will not be entitled to a refund of the EMI amount once it has been deposited. | 4.6 ಸಾಲಗಾರರು EMI ಅನ್ನು ಮುಂಗಡವಾಗಿ ಪಾವತಿಸಿದರೆ ಲಭ್ಯವಿರುವ ರಿವಾಲ್ವಿಂಗ್ ಕ್ರೆಡಿಟ್ ಲೈನ್ ಮತ್ತು ಅವಧಿ ಮೀರಿದ ಬಾಕಿಗಳನ್ನು ಮುಂಬರುವ ಗಡುವಿನ ದಿನಾಂಕದಂದು ಅಪ್‌ಡೇಟ್ ಮಾಡಲಾಗುತ್ತದೆ. ಇದಲ್ಲದೆ, ಸಾಲಗಾರರು EMI ಮೊತ್ತವನ್ನು ಡೆಪಾಸಿಟ್ ಮಾಡಿದ ನಂತರ ಮರುಪಾವತಿಗೆ ಅರ್ಹರಾಗಿರುವುದಿಲ್ಲ. |
| **5. PENAL CHARGES** | **5. ದಂಡನಾ ಶುಲ್ಕಗಳು** |
| 5.1 In the event of default on the part of the Borrower in making payment of the Outstanding Dues on the Repayment Date or Due Date or any other amount due and payable under the Loan Documents, as and when the same is/are due to be paid, the Borrower shall pay to the Lender the Penal Charges as mentioned in the Schedule I. Such Penal Charges are cumulative in nature and shall be payable | 5.1 ಸಾಲ ದಾಖಲೆಗಳ ಅಡಿಯಲ್ಲಿ ಮರುಪಾವತಿ ದಿನಾಂಕ ಅಥವಾ ಗಡುವು ದಿನಾಂಕದಂದು ಅಥವಾ ಅವಧಿ ಮೀರಿದ ಬಾಕಿಯಿರುವ ಮೊತ್ತ ಮತ್ತು ಪಾವತಿಸಬೇಕಾದ ಯಾವುದೇ ಮೊತ್ತದ ಮೇಲೆ ಸಾಲಗಾರರು ಪಾವತಿಗೆ ವಿಫಲರಾದರೆ, ಸಾಲಗಾರರು ಶೆಡ್ಯೂಲ್ I ರಲ್ಲಿ ಉಲ್ಲೇಖಿಸಿದಂತೆ ದಂಡ ಶುಲ್ಕಗಳನ್ನು ಸಾಲದಾತರಿಗೆ ಪಾವತಿಸಬೇಕು. ಅಂತಹ ದಂಡ ಶುಲ್ಕಗಳು ಸಂಚಿತ ಸ್ವರೂಪದ್ದಾಗಿರುತ್ತವೆ ಮತ್ತು ಮರುಪಾವತಿಯಲ್ಲಿ ಡೀಫಾಲ್ಟ್ ದಿನಾಂಕದಿಂದ ಮತ್ತು ಅಂತಹ |

| | |
|---|---|
| on and from the date of default in repayment to and including the date on which such delay/default is rectified. The Lender's right to claim such Penal Charges shall be without prejudice to the Lender's right to take any other action available to it under the terms of this Agreement or at law in respect of such event of default. | ವಿಳಂಬ/ಡೀಫಾಲ್ಟ್ ಕೊನೆಗೊಂಡ ದಿನಾಂಕವನ್ನು ಒಳಗೊಂಡಂತೆ, ಮೊತ್ತವನ್ನು ಪಾವತಿಸಬೇಕಾಗುತ್ತದೆ. ಈ ರೀತಿಯ ದಂಡದ ಶುಲ್ಕಗಳನ್ನು ಪಡೆಯುವ ಸಾಲದಾತರ ಹಕ್ಕು, ಈ ಒಪ್ಪಂದದ ಕರಾರುಗಳ ಅಡಿಯಲ್ಲಿ ಅಥವಾ ಕಾನೂನಿನಲ್ಲಿ ಲಭ್ಯವಿರುವ ಯಾವುದೇ ಇತರ ಕ್ರಮವನ್ನು ತೆಗೆದುಕೊಳ್ಳುವ ಸಾಲದಾತರ ಹಕ್ಕಿಗೆ ಯಾವುದೇ ಹಾನಿಯಾಗದಂತೆ ಇರುತ್ತದೆ. |
| 5.2 On the occurrence of an Event of Default, the Borrower shall, without prejudice to the rights of the Lender to declare an Event of Default, pay on the outstanding Loan, Penal Charges from the date of occurrence of the Event of Default till such time the Event of Default is cured. | 5.2 ಸಾಲಗಾರರು ಸಾಲದಾತರಿಗೆ ಸಾಲ ಮರುಪಾವತಿಸದೇ, ಸಾಲದಾತರು ಸಾಲದ ಡೀಫಾಲ್ಟ್ ಮಾಡಿರುವ ಘಟನೆಯನ್ನು ಘೋಷಿಸುವ ಹಕ್ಕುಗಳಿಗೆ ಯಾವುದೇ ಹಾನಿಯಾಗದಂತೆ, ಅವಧಿ ಮೀರಿದ ಸಾಲದ ಮೇಲೆ, ಡೀಫಾಲ್ಟ್ ಘಟನೆ ಸಂಭವಿಸಿದ ದಿನಾಂಕದಿಂದ ಆ ಮೊತ್ತವನ್ನು ಪಾವತಿಸುವವರೆಗೆ ದಂಡ ಶುಲ್ಕವನ್ನು ಪಾವತಿಸಬೇಕು. |
| 5.3 Any charges accruing under this Clause shall be immediately payable by the Borrower to the Lender and shall constitute the Outstanding Dues till the payment thereof. | 5.3 ಈ ಷರತ್ತಿನ ಅಡಿಯಲ್ಲಿ ಸಂಗ್ರಹವಾಗುವ ಯಾವುದೇ ಶುಲ್ಕಗಳನ್ನು ಸಾಲಗಾರರು ಸಾಲದಾತರಿಗೆ ತಕ್ಷಣವೇ ಪಾವತಿಸಬೇಕು ಮತ್ತು ಅವಧಿ ಮೀರಿದ ಮೊತ್ತವನ್ನು ಪಾವತಿಸುವವರೆಗೆ ಇದು ಮುಂದುವರಿಯುತ್ತದೆ. |
| 5.4 The levy of Penal Charges under this Clause shall not prevent the Lender from declaring an Event of Default and shall not prejudice the exercise of any rights and remedies available to the Lender upon the occurrence of an Event of Default. | 5.4 ಈ ಷರತ್ತಿನ ಅಡಿಯಲ್ಲಿ ದಂಡದ ಶುಲ್ಕಗಳನ್ನು ವಿಧಿಸುವುದರಿಂದ ಸಾಲದಾತರು ಸಾಲದ ಮರುಪಾವತಿಯಲ್ಲಿ ಡೀಫಾಲ್ಟ್ ಎಂದು ಘೋಷಿಸುವುದಕ್ಕೆ ಲಭ್ಯವಿರುವ ಯಾವುದೇ ಹಕ್ಕುಗಳು ಮತ್ತು ಪರಿಹಾರಗಳ ಚಲಾವಣೆಗೆ ಅಡ್ಡಿಯಾಗುವುದಿಲ್ಲ. |
| 5.5 It is clarified that the quantum of Penal Charges reflects the incurred costs and essential resources utilized in facilitating the collection procedures in the event of default in repayment by the Borrower. | 5.5 ಸಾಲಗಾರರು ಮೊತ್ತವನ್ನು ಮರುಪಾವತಿಸದೇ ಡೀಫಾಲ್ಟ್ ಆದ ಸಂದರ್ಭದಲ್ಲಿ ವಸೂಲಾತಿ ಕಾರ್ಯವಿಧಾನಗಳನ್ನು ಸರಳಗೊಳಿಸಲು ಬಳಸಲಾಗುವ ಅಗತ್ಯ ಸಂಪನ್ಮೂಲಗಳು ಮತ್ತು ಉಂಟಾದ ವೆಚ್ಚಗಳನ್ನು ದಂಡ ಶುಲ್ಕಗಳ ಪ್ರಮಾಣಕ್ಕೆ ಸೇರಿಸಲಾಗುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ. ದಂಡದ ಶುಲ್ಕಗಳೆಂದರೆ, ಸಂಗ್ರಹಣಾ ತಂಡದ ಸಿಬ್ಬಂದಿಗೆ |

| | |
|---|---|
| Penal Charges herein include, but are not limited to, expenses related to collection team staff, office space allocation, communication expenditures, and postage for distributing hard copy letters and notices. The Borrower acknowledges and agrees that as per the rationale explained, the Penal Charges are reasonable and represents the genuine pre-estimates of the loss incurred by the Lender in the event of non-payment by the Borrower. Further, the Borrower confirms that the Loan provided under this Agreement is for personal purposes and the Borrower hereby waives any defense available under usury or other Applicable Laws relating to the levy of Penal Charges. | ಸಂಬಂಧಿಸಿದ ವೆಚ್ಚಗಳು, ಕಚೇರಿ ಸ್ಥಳ ಹಂಚಿಕೆ, ಸಂವಹನ ವೆಚ್ಚಗಳು ಮತ್ತು ಮುದ್ರಿತ ಪ್ರತಿ ಪತ್ರಗಳು ಮತ್ತು ಸೂಚನೆಗಳನ್ನು ವಿತರಿಸಲು ಅಂಚೆ ವೆಚ್ಚವನ್ನು ಒಳಗೊಂಡಿದ್ದು ಆದರೆ ಇವುಗಳಿಗೆ ಸೀಮಿತವಾಗಿರುವುದಿಲ್ಲ. ತಾರ್ಕಿಕವಾಗಿ ವಿವರಿಸಲ್ಪಟ್ಟಂತೆ, ದಂಡದ ಶುಲ್ಕಗಳು ಸಮಂಜಸವಾಗಿದ್ದು, ಸಾಲಗಾರರು ಸಾಲವನ್ನು ಪಾವತಿಸದಿದ್ದಲ್ಲಿ ಸಾಲದಾತರಿಗೆ ಉಂಟಾಗಿರುವ ನಷ್ಟದ ನಿಜವಾದ ಪೂರ್ವ ಅಂದಾಜುಗಳನ್ನು ಪ್ರತಿನಿಧಿಸುತ್ತವೆ ಎಂಬುದನ್ನು ಸಾಲಗಾರರು ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ. ಇದಲ್ಲದೆ, ಈ ಒಪ್ಪಂದದ ಅಡಿಯಲ್ಲಿ ನೀಡಲಾದ ಸಾಲವು ವೈಯಕ್ತಿಕ ಉದ್ದೇಶಗಳಿಗಾಗಿ ಎಂದು ಸಾಲಗಾರರು ದೃಢೀಕರಿಸುತ್ತಾರೆ ಮತ್ತು ದಂಡ ಶುಲ್ಕಗಳ ವಿಧಿಸುವಿಕೆಗೆ ಸಂಬಂಧಿಸಿದಂತೆ ಬಡ್ಡಿ ಅಥವಾ ಇತರ ಅನ್ವಯವಾಗುವ ಕಾನೂನುಗಳ ಅಡಿಯಲ್ಲಿ ಲಭ್ಯವಿರುವ ಯಾವುದೇ ಪ್ರತಿವಾದವನ್ನು ಸಾಲಗಾರರು ಈ ಮೂಲಕ ಬಿಟ್ಟುಕೊಡುತ್ತಾರೆ. |
| **6. MODE OF PAYMENT AND EARLY REPAYMENT** | **6. ಪಾವತಿ ವಿಧಾನ ಮತ್ತು ಆರಂಭಿಕ ಮರುಪಾವತಿ** |
| 6.1 The Borrower shall re-pay the Outstanding Dues during the Grace period through the mode of Debit Card/Net-banking/Unified Payments Interface (UPI); | 6.1 ಸಾಲಗಾರರು ಡೆಬಿಟ್ ಕಾರ್ಡ್/ನೆಟ್-ಬ್ಯಾಂಕಿಂಗ್/ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (UPI) ವಿಧಾನದ ಮೂಲಕ ರಿಯಾಯಿತಿ ಅವಧಿಯಲ್ಲಿ ಅವಧಿ ಮೀರಿದ ಬಾಕಿ ಮೊತ್ತಗಳನ್ನು ಮರುಪಾವತಿಸಬೇಕು; |
| 6.2 Any dispute or difference of any nature whatsoever shall not entitle the Borrower to withhold or delay payment of any EMIs or other sum; | 6.2 ಯಾವುದೇ ರೀತಿಯ ವಿವಾದ ಅಥವಾ ವ್ಯಾಜ್ಯವು ಸಾಲಗಾರರಿಗೆ ಯಾವುದೇ EMIಗಳು ಅಥವಾ ಇತರ ಮೊತ್ತದ ಪಾವತಿಯನ್ನು ತಡೆಹಿಡಿಯಲು ಅಥವಾ ವಿಳಂಬ ಮಾಡಲು ಕಾರಣವಾಗುವುದಿಲ್ಲ; |
| 6.3 The Borrower agrees and acknowledges that there can be additional charges for | 6.3 ವಹಿವಾಟುಗಳಿಗೆ ಹೆಚ್ಚುವರಿ |

| | |
|---|---|
| transactions and the same shall be borne by the Borrower. | ಶುಲ್ಕಗಳು ಇರಬಹುದು ಮತ್ತು ಅದನ್ನು ಸಾಲಗಾರರು ಭರಿಸುತ್ತಾರೆ ಎಂದು ಸಾಲಗಾರರು ಒಪ್ಪುತ್ತಾರೆ ಮತ್ತು ದೃಢೀಕರಿಸುತ್ತಾರೆ. |
| **7. BORROWER REPRESENTATIONS & WARRANTIES & COVENANT** | **7. ಸಾಲಗಾರರ ಪ್ರಾತಿನಿಧ್ಯಗಳು ಮತ್ತು ವಾರಂಟಿಗಳು ಮತ್ತು ಒಡಂಬಡಿಕೆ** |
| 7.1 Borrower hereby represents, warrants and acknowledges: | 7.1 ಸಾಲಗಾರರು ಈ ಮೂಲಕ ಕೆಳಗಿನ ವಿಷಯಗಳನ್ನು ಪ್ರತಿನಿಧಿಸುತ್ತಾರೆ, ಖಚಿತಪಡಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ: |
| a. it is a citizen and a person resident in India and will continue to remain so during the tenure of this loan; | a. ಒಬ್ಬ ಭಾರತದ ನಾಗರಿಕ ಮತ್ತು ಭಾರತದಲ್ಲಿ ವಾಸಿಸುವ ವ್ಯಕ್ತಿಯಾಗಿದ್ದು, ಈ ಸಾಲದ ಅವಧಿಯಲ್ಲಿ ಇದೇ ರೀತಿಯಲ್ಲಿಯೇ ಇರುತ್ತದೆ; |
| b. all information furnished in respect of the Loan are correct and the Borrower is a major, of sound mind and competent to enter into the contract; | b. ಸಾಲಕ್ಕೆ ಸಂಬಂಧಿಸಿದಂತೆ ಒದಗಿಸಲಾದ ಎಲ್ಲಾ ಮಾಹಿತಿಗಳು ಸರಿಯಾಗಿವೆ ಮತ್ತು ಸಾಲಗಾರರು ಪ್ರಾಪ್ತ ವಯಸ್ಕರು, ಮಾನಸಿಕವಾಗಿ ಸ್ವಸ್ಥರು ಮತ್ತು ಒಪ್ಪಂದವನ್ನು ಮಾಡಿಕೊಳ್ಳಲು ಸಮರ್ಥರಾಗಿದ್ದಾರೆ; |
| c. the Borrower has adequate legal capacity to accept this and perform its obligations under this agreement; | c. ಸಾಲಗಾರರು ಈ ಒಪ್ಪಂದವನ್ನು ಸ್ವೀಕರಿಸಲು ಮತ್ತು ಈ ಒಪ್ಪಂದದ ಅಡಿಯಲ್ಲಿ ತಮ್ಮ ಬಾಧ್ಯತೆಗಳನ್ನು ನಿರ್ವಹಿಸಲು ಸಾಕಷ್ಟು ಕಾನೂನಾತ್ಮಕವಾಗಿ ಸಮರ್ಥರಾಗಿದ್ದಾರೆ; |
| d. to furnish all information of its finances and business as is required by the Lender; | d. ಸಾಲದಾತರಿಗೆ ಅಗತ್ಯವಿರುವ ರೀತಿಯಲ್ಲಿ ತಮ್ಮ ಆರ್ಥಿಕ ಮತ್ತು ಉದ್ಯಮದ ಎಲ್ಲಾ ಮಾಹಿತಿಯನ್ನು ಒದಗಿಸುವುದು; |
| e. it is not a party to any litigation and to the best of its knowledge, no act(s) or omission(s) has been committed that may give rise to any litigation; | e. ಇದು ಯಾವುದೇ ಮೊಕದ್ದಮೆಯನ್ನು ಹೊಂದಿರುವ ಕಕ್ಷಿಯಾಗಿಲ್ಲ ಮತ್ತು ಅದರ ಅತ್ಯುತ್ತಮ ಜ್ಞಾನದ ಪ್ರಕಾರ, ಯಾವುದೇ ಮೊಕದ್ದಮೆಗೆ ಕಾರಣವಾಗುವ ಯಾವುದೇ ಕೃತ್ಯ(ಗಳು) ಅಥವಾ ಲೋಪ(ಗಳು) ಮಾಡಿಲ್ಲ; |
| f. that all repayments shall be in compliance of all applicable laws. | f. ಎಲ್ಲಾ ಮರುಪಾವತಿಗಳು ಅನ್ವಯವಾಗುವ ಎಲ್ಲಾ ಕಾನೂನುಗಳಿಗೆ ಅನುಸಾರವಾಗಿರಬೇಕು. |
| g. upon execution by the Borrower, this Agreement will constitute a valid, | |

| | |
|---|---|
| enforceable and legally binding obligation of the Borrower; | g. ಸಾಲಗಾರರು ಕಾರ್ಯಗತಗೊಳಿಸಿದ ನಂತರ, ಈ ಒಪ್ಪಂದವು ಸಾಲಗಾರರ ಮಾನ್ಯ, ಜಾರಿಗೊಳಿಸಬಹುದಾದ ಮತ್ತು ಕಾನೂನುಬದ್ಧವಾಗಿ ಬಾಧ್ಯತಾ ಪರಿಣಾಮವನ್ನು ಹೊಂದಿರುತ್ತದೆ; |
| h. there is no law, regulation, decree or act and no provision of any existing contract, agreement or instrument to which Borrower is a party that would be contravened by this Agreement or by the performance or observance of any of its terms; | h. ಸಾಲಗಾರರು ಪಕ್ಷವಾಗಿ ಒಳಗೊಂಡಿರುವ ಯಾವುದೇ ಅಸ್ತಿತ್ವದಲ್ಲಿರುವ ಒಪ್ಪಂದ, ಒಡಂಬಡಿಕೆ ಅಥವಾ ದಾಖಲೆಯ ಯಾವುದೇ ಕಾನೂನು, ನಿಯಂತ್ರಣ, ತೀರ್ಪು ಅಥವಾ ಕಾಯ್ದೆ ಅಥವಾ ನಿಬಂಧನೆಯು ಈ ಒಪ್ಪಂದದಿಂದ ಅಥವಾ ಅದರ ಯಾವುದೇ ನಿಯಮಗಳ ಕಾರ್ಯಕ್ಷಮತೆ ಅಥವಾ ಆಚರಣೆಯಿಂದ ಉಲ್ಲಂಘಿಸಲ್ಪಡುವುದಿಲ್ಲ; |
| i. all information furnished by or on behalf of the Borrower in connection with obtaining the Loan, whether prior to the date hereof or contemporaneously with the execution of this Agreement and all information furnished hereinafter, is and will be true, correct and complete in all material respects as on the date on which such information is provided or certified. | i. ಸಾಲ ಪಡೆಯುವ ವಿಷಯಕ್ಕೆ ಸಂಬಂಧಿಸಿ ಸಾಲಗಾರರು ಅಥವಾ ಅವರ ಪರವಾಗಿ ಒದಗಿಸಲಾದ ಎಲ್ಲಾ ಮಾಹಿತಿ, ಈ ಒಪ್ಪಂದದ ಜಾರಿ ದಿನಾಂಕಕ್ಕೂ ಮೊದಲು ಅಥವಾ ಆ ದಿನಾಂಕದಂದು ಮತ್ತು ಇನ್ನು ಮುಂದೆ ಒದಗಿಸಲಾದ ಎಲ್ಲಾ ಮಾಹಿತಿಯು, ಅಂತಹ ಮಾಹಿತಿಯನ್ನು ಒದಗಿಸಿದ ಅಥವಾ ಪ್ರಮಾಣೀಕರಿಸಿದ ದಿನಾಂಕಕ್ಕೆ ಅನುಗುಣವಾಗಿ ಸರಿಯಾಗಿದೆ ಮತ್ತು ಪೂರ್ಣವಾಗಿರುತ್ತದೆ. |
| 7.2 The Borrower hereby expressly covenant as follows: | 7.2 ಸಾಲಗಾರನು ಈ ಮೂಲಕ ಈ ಕೆಳಗಿನಂತೆ ಸ್ಪಷ್ಟವಾಗಿ ಒಡಂಬಡಿಕೆ ಮಾಡಿಕೊಳ್ಳುತ್ತಾನೆ: |
| a. The Loan shall be governed by the terms herein contained as well as those embodied in the other Loan Documents and the Borrower hereby undertakes to comply with and adhere to all terms thereof and the provisions | a. ಸಾಲವು ಇಲ್ಲಿ ಒಳಗೊಂಡಿರುವ ಕರಾರುಗಳು ಮತ್ತು ಇತರ ಸಾಲ ದಾಖಲೆಗಳಲ್ಲಿ ಒದಗಿಸಲಾದ ಕರಾರುಗಳಿಂದ ನಿಯಂತ್ರಿಸಲ್ಪಡುತ್ತದೆ ಮತ್ತು ಸಾಲಗಾರರು ಇಲ್ಲಿ ಅದರ ಎಲ್ಲಾ ಕರಾರುಗಳನ್ನು ಮತ್ತು ಅನ್ವಯವಾಗುವ ಕಾನೂನುಗಳ ನಿಬಂಧನೆಗಳನ್ನು ಅನುಸರಿಸಲು ಮತ್ತು ಪಾಲಿಸಲು ಬದ್ಧರಾಗುತ್ತಾರೆ; |

of the Applicable Laws;

b. ensure timely payment of the Outstanding Dues;
c. The Borrower shall utilize the Loan only for legitimate purposes and no portion of the Loan shall be used for any illegal and/or antisocial and/or speculative purpose including but not limited to participation in stock markets/ IPOs and/or purchase/investment in capital market and/or gambling and/or money laundering;
d. Promptly notify the Lender through a written notice to its concerned address or via the Digital Lending Application (DLA), of any change in the Borrower's postal address and/or mobile number or any other personal details provided in the application or this Agreement;
e. Execute any and all documents, as the Lender may require, from time to time, for duly or more perfectly securing the repayment of the Loan;
f. The Borrower shall not dispute and/or hold the Lender responsible for (1) non-availability or non-accessibility of the Lender's website (i.e. https://fincfriends.com/), electronic payment

b. ಪಾವತಿಸಬೇಕಾದ ಬಾಕಿಯಿರುವ ಮೊತ್ತಗಳನ್ನು ಸಕಾಲಿಕವಾಗಿ ಪಾವತಿಸುತ್ತೇವೆಂದು ಖಚಿತಪಡಿಸಿಕೊಳ್ಳುತ್ತಾರೆ;
c. ಸಾಲಗಾರರು ಸಾಲವನ್ನು ಕಾನೂನುಬದ್ಧ ಉದ್ದೇಶಗಳಿಗಾಗಿ ಮಾತ್ರ ಬಳಸಿಕೊಳ್ಳಬೇಕು ಮತ್ತು ಸಾಲದ ಯಾವುದೇ ಭಾಗವನ್ನು ಯಾವುದೇ ಕಾನೂನುಬಾಹಿರ ಮತ್ತು/ಅಥವಾ ಸಮಾಜವಿರೋಧಿ ಮತ್ತು/ಅಥವಾ ಅನುಮಾನಾಸ್ಪದ ಉದ್ದೇಶಕ್ಕಾಗಿ ಬಳಸಬಾರದು, ಇದರಲ್ಲಿ ಷೇರು ಮಾರುಕಟ್ಟೆಗಳು/IPOಗಳು ಮತ್ತು/ಅಥವಾ ಬಂಡವಾಳ ಮಾರುಕಟ್ಟೆಯಲ್ಲಿ ಖರೀದಿ/ಹೂಡಿಕೆ ಮತ್ತು/ಅಥವಾ ಜೂಜಾಟ ಮತ್ತು/ಅಥವಾ ಹಣ ವರ್ಗಾವಣೆ ಸೇರಿದ್ದು ಆದರೆ ಇವುಗಳಿಗೆ ಸೀಮಿತವಾಗಿಲ್ಲ;
d. ಸಾಲಗಾರರ ಅಂಚೆ ವಿಳಾಸ ಮತ್ತು/ಅಥವಾ ಮೊಬೈಲ್ ಸಂಖ್ಯೆಯಲ್ಲಿ ಅಥವಾ ಅರ್ಜಿಯಲ್ಲಿ ಅಥವಾ ಈ ಒಪ್ಪಂದದಲ್ಲಿ ಒದಗಿಸಲಾದ ಯಾವುದೇ ಇತರ ವೈಯಕ್ತಿಕ ವಿವರಗಳಲ್ಲಿ ಯಾವುದೇ ಬದಲಾವಣೆಯಿದ್ದರೆ, ಸಾಲದಾತರಿಗೆ ಸಂಬಂಧಿತ ವಿಳಾಸಕ್ಕೆ ಲಿಖಿತ ಸೂಚನೆಯ ಮೂಲಕ ಅಥವಾ ಡಿಜಿಟಲ್ ಲೆಂಡಿಂಗ್ ಅಪ್ಲಿಕೇಶನ್ (DLA) ಮೂಲಕ ತಕ್ಷಣವೇ ತಿಳಿಸಬೇಕು;
e. ಸಾಲದ ಮರುಪಾವತಿಯನ್ನು ಸರಿಯಾಗಿ ಅಥವಾ ಹೆಚ್ಚು ಸಮಂಜಸವಾಗಿರಿಸಲು, ಸಾಲದಾತರಿಗೆ ಕಾಲಕಾಲಕ್ಕೆ ಅಗತ್ಯವಿರುವ ಯಾವುದೇ ಮತ್ತು ಎಲ್ಲಾ ರೀತಿಯ ದಾಖಲೆಗಳನ್ನು ಒದಗಿಸಬೇಕು;
f. ಸಾಲದಾತರ ನಿಯಂತ್ರಣದಲ್ಲಿರದ ವಿಷಯಗಳಿಗಾಗಿ (1) ಸಾಲದಾತರ ವೆಬ್‌ಸೈಟ್ ಲಭ್ಯವಿಲ್ಲದಿರುವುದು ಅಥವಾ ಪ್ರವೇಶಿಸಲು ಸಾಧ್ಯವಾಗದಿರುವುದು

gateway, telephone(s), or office(s) of the Lender for reasons beyond the Lender's control; or (2) any typographical error or inaccuracy on the Lender's website or any written, e-mail & SMS communication;

g. The Borrower hereby agrees and authorizes the Lender to debit its account without notice, towards principal, Interest and/or other charges, expenses etc., due to the Lender under this Agreement to the extent of balance available in the said account and the said debit made as per the authority specifically given hereby and credit of such amount to the Loan Account, shall be treated as an acknowledgement of payment for the purpose of limitation.

**8. EVENTS OF DEFAULT**

8.1 The following acts/events, shall each constitute an "**Event of Default**" by the Borrower for the purposes of each Loan:

a. The Borrower fails to make payment of any Outstanding Dues on Due Date;

(ಅಂದರೆ https://fincfriends.com/), ಎಲೆಕ್ಟ್ರಾನಿಕ್ ಪಾವತಿ ಗೇಟ್‌ವೇ, ದೂರವಾಣಿ(ಗಳು) ಅಥವಾ ಸಾಲದಾತರ ಕಚೇರಿ(ಗಳು) ಅಥವಾ (2) ಸಾಲದಾತರ ವೆಬ್‌ಸೈಟ್‌ನಲ್ಲಿ ಅಥವಾ ಯಾವುದೇ ಲಿಖಿತ, ಇ-ಮೇಲ್ ಮತ್ತು SMS ಸಂವಹನದಲ್ಲಿ ಯಾವುದೇ ಮುದ್ರಣದೋಷ ಅಥವಾ ನಿಖರತೆ ಇಲ್ಲದಿರುವುದು; ಈ ರೀತಿಯ ಕಾರಣಗಳಿಗಾಗಿ ಸಾಲದಾತರೊಂದಿಗೆ ವಾಗ್ವಾದ ನಡೆಸುವುದಿಲ್ಲ ಮತ್ತು/ಅಥವಾ ಸಾಲದಾತರನ್ನು ಹೊಣೆಗಾರರನ್ನಾಗಿ ಮಾಡುವುದಿಲ್ಲ;

g. ಈ ಒಪ್ಪಂದದ ಅಡಿಯಲ್ಲಿ ಸಾಲದಾತರಿಗೆ ಬಾಕಿ ಇರುವ ಅಸಲು, ಬಡ್ಡಿ ಮತ್ತು/ಅಥವಾ ಇತರ ಶುಲ್ಕಗಳು, ವೆಚ್ಚಗಳು ಇತ್ಯಾದಿ ಉದ್ದೇಶಗಳಿಗಾಗಿ ಪೂರ್ವ ಸೂಚನೆಯಿಲ್ಲದೇ ತನ್ನ ಖಾತೆಯಿಂದ ಡೆಬಿಟ್ ಮಾಡಬಹುದು ಎಂದು ಸಾಲಗಾರರು ಈ ಮೂಲಕ ಒಪ್ಪುತ್ತಾರೆ ಮತ್ತು ಅಧಿಕಾರ ನೀಡುತ್ತಾರೆ. ಸದರಿ ಖಾತೆಯಲ್ಲಿ ಲಭ್ಯವಿರುವ ಬ್ಯಾಲೆನ್ಸ್‌ಗೆ ಮತ್ತು ಇಲ್ಲಿ ನಿರ್ದಿಷ್ಟಪಡಿಸಲಾದ ಅಧಿಕಾರದ ಪ್ರಕಾರ ಮಾಡಿದ ಡೆಬಿಟ್ ಮತ್ತು ಸಾಲ ಖಾತೆಗೆ ಅಂತಹ ಮೊತ್ತವನ್ನು ಜಮಾ ಮಾಡುವುದನ್ನು ಮಿತಿಯ ಉದ್ದೇಶಕ್ಕಾಗಿ ಪಾವತಿಯ ಸ್ವೀಕೃತಿ ಎಂದು ಪರಿಗಣಿಸಲಾಗುತ್ತದೆ.

**8. ಡೀಫಾಲ್ಟ್ ಘಟನೆಗಳು**

8.1 ಪ್ರತಿಯೊಂದು ಸಾಲದ ವಿಷಯದಲ್ಲಿಯೂ ಈ ಕೆಳಗಿನ ಕಾರ್ಯಗಳು/ಘಟನೆಗಳು ಸಾಲಗಾರರಿಂದ "**ಡೀಫಾಲ್ಟ್ ಘಟನೆ**" ಯೆಂದು ಪರಿಗಣಿಸಲಾಗುತ್ತದೆ:

a. ಸಾಲಗಾರರು ಯಾವುದೇ ಅವಧಿ ಮೀರಿದ ಬಾಕಿ ಮೊತ್ತವನ್ನು ನಿಗದಿತ ದಿನಾಂಕದಂದು ಪಾವತಿಸಲು

| | |
|---|---|
| b. Breach of any terms, covenants, representation, warranty, declaration or confirmation under the Loan Documents;<br>c. Any fraud or forgery or misrepresentation or concealment of material information by Borrower which could have affected decision of Lender to grant any Loan/Revolving Credit Line Facility;<br>d. The Borrower is or becomes a party to any litigation, arbitration, administrative or other action, investigation by any governmental entity, claim, suit or proceedings which would have a material adverse effect on the terms of this Agreement;<br>e. Death, lunacy or any other permanent disability of the Borrower;<br>f. Borrower utilizes the Loan Amount for any illegal purpose or for any purposes which is prejudicial to the interest of the public;<br>g. Occurrence of any events, conditions or circumstances (including any change in law) which in the sole and absolute opinion of Lender could have a Material Adverse Effect, including limitation of any proceedings or action for bankruptcy/liquidation/ insolvency of the Borrower. | ವಿಫಲರಾದರೆ;<br>b. ಸಾಲ ದಾಖಲೆಗಳ ಅಡಿಯಲ್ಲಿ ಯಾವುದೇ ಕರಾರುಗಳು, ಒಪ್ಪಂದಗಳು, ಪ್ರಾತಿನಿಧ್ಯ, ಖಾತರಿ, ಘೋಷಣೆ ಅಥವಾ ದೃಢೀಕರಣದ ಉಲ್ಲಂಘನೆ ಮಾಡಿದರೆ;<br>c. ಯಾವುದೇ ಸಾಲ/ರಿವಾಲ್ವಿಂಗ್ ಕ್ರೆಡಿಟ್ ಲೈನ್ ಸೌಲಭ್ಯವನ್ನು ನೀಡುವ ಸಾಲದಾತರ ನಿರ್ಧಾರದ ಮೇಲೆ ಪರಿಣಾಮ ಬೀರಬಹುದಾದ ಯಾವುದೇ ವಂಚನೆ ಅಥವಾ ನಕಲಿ ಅಥವಾ ತಪ್ಪು ನಿರೂಪಣೆ ಅಥವಾ ಸಾಲಗಾರರಿಂದ ವಸ್ತು ಮಾಹಿತಿಯನ್ನು ಮುಚ್ಚಿಟ್ಟರೆ;<br>d. ಸಾಲಗಾರರು ಈ ಒಪ್ಪಂದದ ಕರಾರುಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದಾದ ಯಾವುದೇ ಸರ್ಕಾರಿ ಘಟಕದ ಯಾವುದೇ ಮೊಕದ್ದಮೆ, ಮಧ್ಯಸ್ಥಿಕೆ, ಆಡಳಿತಾತ್ಮಕ ಅಥವಾ ಇತರ ಕ್ರಮ, ತನಿಖೆ, ಹಕ್ಕು, ಮೊಕದ್ದಮೆ ಅಥವಾ ವಿಚಾರಣೆಗಳಿಗೆ ಒಳಗೊಂಡ ಅಥವಾ ಒಳಗೊಳ್ಳುವ ಕಕ್ಷಿಯಾಗಿದ್ದರೆ;<br>e. ಸಾಲಗಾರರ ಸಾವು, ಬುದ್ಧಿಭ್ರಮಣೆ ಅಥವಾ ಯಾವುದೇ ಇತರ ಶಾಶ್ವತ ಅಂಗವೈಕಲ್ಯವಾದರೆ;<br>f. ಸಾಲಗಾರರು ಸಾಲದ ಮೊತ್ತವನ್ನು ಯಾವುದೇ ಕಾನೂನುಬಾಹಿರ ಉದ್ದೇಶಕ್ಕಾಗಿ ಅಥವಾ ಸಾರ್ವಜನಿಕ ಹಿತಾಸಕ್ತಿಗೆ ಹಾನಿಕಾರಕವಾದ ಯಾವುದೇ ಉದ್ದೇಶಗಳಿಗಾಗಿ ಬಳಸಿದರೆ;<br>g. ಸಾಲದಾತರ ಏಕೈಕ ಮತ್ತು ಸಂಪೂರ್ಣ ಅಭಿಪ್ರಾಯದಲ್ಲಿ, ಸಾಲಗಾರರ ದಿವಾಳಿತನ/ಫೈಸಲಾತಿ/ಪಾಪರಿಕೆಗೆ ಸಂಬಂಧಿಸಿದ ಯಾವುದೇ ಪ್ರಕ್ರಿಯೆಗಳು ಅಥವಾ ಕ್ರಮಗಳ ಮಿತಿ ಸೇರಿದಂತೆ, ಗಂಭೀರ ಪ್ರತಿಕೂಲ ಪರಿಣಾಮವನ್ನು ಬೀರಬಹುದಾದ ಯಾವುದೇ ಘಟನೆಗಳು, ಷರತ್ತುಗಳು ಅಥವಾ ಸನ್ನಿವೇಶಗಳು (ಕಾನೂನಿನಲ್ಲಿನ ಯಾವುದೇ ಬದಲಾವಣೆ ಸೇರಿದಂತೆ) ಸಂಭವಿಸುವುದು. |

| | |
|---|---|
